ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 32 | ಆಗಸ್ಟ್ 7, 1983 | ಬೆಲೆ 60 ಪೈಸೆ

೧೧-೮-೮೩ರ ಬೆಲೆಯೇರಿಕೆ ವಿರೋಧಿ ದಿನಾಚರಣೆಯನ್ನು ಯಶಸ್ವಿ ಗೊಳಿಸಿರಿ

-ಎನ್. ಕೆ. ಉಪಾಧ್ಯಾಯ

"ಜೀವನಾವಶ್ಯಕ ವಸ್ತುಗಳ ಬೆಲೆ ಹಿಂದೆಂದೂ ಇಲ್ಲದಷ್ಟು ಏರಿವೆ. ಹಲವಾರು ಅವಶ್ಯಕ ವಸ್ತುಗಳು ಸಾಮಾನ್ಯ ಜನರ ಕೈಗೆಟುಕಲಾರದಾಗಿವೆ ಮಾತ್ರವಲ್ಲ ಅವುಗಳಲ್ಲಿ ಕೆಲವಂತೂ ಮಾರುಕಟ್ಟೆಯಿಂದ ಸಂಪೂರ್ಣ ಕಣ್ಮರೆಯಾಗಿಬಿಟ್ಟಿವೆ. ನಮ್ಮ ಒಟ್ಟು ಹಣಕಾಸಿನ ವ್ಯವಸ್ಥೆಯೇ ದೊಡ್ಡ ಬಂಡವಳಗಾರ ತಿಮಿಂಗಿಲಗಳು, ಅಕ್ರಮ ದಾಸ್ತಾನುಗಾರರು ಮತ್ತು ಲಾಭಬಡಕರ ಕಪಿಮುಷ್ಟಿಯಲ್ಲಿದೆ. ಬೆಲೆಯೇರಿಕೆಯ ಹೊರೆಯಡಿಯಲ್ಲಿ ನುಗ್ಗಾಗಿರುವ ಜನತೆ ಈಗಾಗಲೇ ಸಕ್ರಿಯ ಪ್ರತಿಭಟನೆ ತೋರಿಸಲಾರಂಭಿಸಿದ್ದಾರೆ." ಎಂದು 1980 ಆಗಸ್ಟ್ ತಿಂಗಳಲ್ಲಿ ದಿಲ್ಲಿಯಲ್ಲಿ ಸೇರಿದ್ದ ಆರು ಪಕ್ಷಗಳ ಸಮಾವೇಶ ತನ್ನ ನಿರ್ಣಯದಲ್ಲಿ ಹೇಳಿದೆ.

"ಬಂಡವಾಳಶಾಹಿ ಜಗತ್ತು ಮತ್ತು ಅದರ ಮಾರುಕಟ್ಟೆಯೊಡನೆ ಹೆಚ್ಚಾಗಿ ಸಂಪರ್ಕವಿರುವ ಅರ್ಥವ್ಯವಸ್ಥೆಯುಳ್ಳ ಭಾರತವೂ, ಮೂರನೇ ಜಗತ್ತಿನ ದೇಶಗಳ ರೀತಿಯಲ್ಲಿಯೇ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಣಾಮಕ್ಕೆ ಒಳಗಾಗಿದೆ. ಈಗಾಗಲೇ ಕೊಡಕಿನಲ್ಲಿರುವ ಅರ್ಥವ್ಯವಸ್ಥೆಯು ಇದರಿಂದ ಮತ್ತಷ್ಟು ಉಲ್ಬಣಗೊಂಡಿದೆ.

"ಪಾಶ್ಚಾತ್ಯ ಸಾಮ್ರಾಜ್ಯಶಾಹಿಗಳು ನಮ್ಮ ಅರ್ಥವ್ಯವಸ್ಥೆಯಲ್ಲಿ ನೇರವಾಗಿ ಹಸ್ತಕ್ಷೇಪ ನಡೆಸುವುದು ಮತ್ತು ಶರತ್ತುಗಳನ್ನು ವಿಧಿಸುವ ಸಾಮರ್ಥ್ಯ ಪಡೆದಿರುವುದು ಹೊಸ ಅಂಶಗಳಲ್ಲೊಂದಾಗಿದೆ. ಇತ್ತೀಚೆಗೆ ನಡೆದ ಅಪಾರ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಸಾಲಕ್ಕೆ ಇಂದಿರಾ ಸರಕಾರ ಒಪ್ಪಿಕೊಂಡ ಕರಾರು-ಶರತ್ತುಗಳೇ ಇದಕ್ಕೆ ಸಾಕ್ಷಿ:" ಎಂದು 82 ಜನವರಿಯಲ್ಲಿ ನಡೆದ ಸಿ. ಪಿ. ಐ (ಎಂ) ಹನ್ನೊಂದನೇ ಅಧಿವೇಶನ ಅಂಗೀಕರಿಸಿದ ನಿರ್ಣಯದಲ್ಲಿ ಹೇಳಿದೆ.

ಕೇಂದ್ರದಲ್ಲಿರುವ ಕಾಂಗ್ರೆಸ್ ಸರಕಾರ ಅನುಸರಿಸುತ್ತ ಬಂದಿರುವ, ಈಗಿನ ಇಂದಿರಾ ಸರಕಾರ ಅನುಸರಿಸುತ್ತಿರುವ ಆರ್ಥಿಕ ನೀತಿಯೇ ಬೆಲೆಯೇರಿಕೆಗೆ ಮುಖ್ಯ ಕಾರಣವಾಗಿದೆ.

ವಿದೇಶಿ ಮತ್ತು ದೇಶಿ ಗುತ್ತೇದಾರಿ ಬಂಡವಾಳದಾರರಿಗೆ ಅನುಕೂಲಕರವಾದ ಆರ್ಥಿಕ ನೀತಿ, ದೇಶಕ್ಕೆ ಹಿತಕರವಲ್ಲದ ಆಮದು-ರಫ್ತು ನೀತಿ, ಕೊರತೆಯ ಹಣಕಾಸಿನ ನೀತಿ; ಇದರ ಪರಿಣಾಮದಿಂದಾಗಿ ಉಂಟಾಗುತ್ತಿರುವ ಹಣದುಬ್ಬರ, ಪ್ರತ್ಯಕ್ಷ ಕರದ ಬದಲಾಗಿ ಅಪ್ರತ್ಯಕ್ಷ ಕರಭಾರ ಹೇರುವ ನೀತಿ, ಅಭಿವೃದ್ಧಿ ಯೋಜನೆಗಳಿಗಾಗಿ ವಿದೇಶಿ ಬಂಡವಾಳದ ಮೇಲೆ ಅವಲಂಬಿಸುವ ನೀತಿ, ವಿದೇಶಿ ಸಾಲ ಪಡೆಯುವಾಗ ಅವರು ಕರಾರುಗಳನ್ನು ಒಪ್ಪಿಕೊಳ್ಳುವ ನೀತಿ, ಲಾಭ ಬಡುಕರಿಗೆ, ಕಳ್ಳಸಂತೆ ಕೋರ ಗುಪ್ತ ಸಂಗ್ರಹಕಾರರ ಲಂಗು ಲಗಾಮಿಲ್ಲದೆ ವ್ಯವಹಾರ ನಡೆಸಲು ಬಿಟ್ಟಿರುವ ನೀತಿ— ಇವುಗಳೆಲ್ಲ ಬೆಲೆಯೇರಿಕೆಗೆ ಮುಖ್ಯ ಕಾರಣಗಳಾಗಿವೆ

ಕೇಂದ್ರ ಸರಕಾರದ ಭಾರಿ ಕೊರತೆಯ ಹಣಕಾಸಿನ ನೀತಿಯೂ, ಆರ್ಥಿಕ ಹಿಂಜರಿತದೊಂದಿಗೆ ಎರಡು ಅಂಶಗಳ ಹಣದುಬ್ಬರ ಇರುವ ಪಾಶ್ಚಿಮಾತ್ಯ ಬಂಡವಾಳಶಾಹಿ ಅರ್ಥವ್ಯವಸ್ಥೆಗಳೊಂದಿಗಿನ ನಮ್ಮ ನಿಕಟ ಸಂಬಂಧವೂ ಹಣದುಬ್ಬರವನ್ನು ಮತ್ತಷ್ಟು ಅಧಿಕಗೊಳಿಸಿ ಬೆಲೆಯೇರಿಕೆಗೆ ಕಾರಣೀಭೂತವಾಗಿದೆ.

ಯೋಜನೆಗಳ ವೆಚ್ಚದಲ್ಲಿ ಹೊರದೇಶಗಳ ನೆರವಿನ ಪ್ರಮಾಣ ಹೆಚ್ಚಾಗುತ್ತಲೇ ಇದೆ. ಈ ಸಾಲದ ಮರುಪಾವತಿಗಾಗಿ ಬಂಡವಾಳಶಾಹಿ ದೇಶಗಳನ್ನೇ ಅವಲಂಬಿಸುತ್ತಿರುವುದರಿಂದ, ಆಮದು-ರಫ್ತಿನ ವಿಷಯದಲ್ಲಿಯೂ ಅವರದೇ ಒತ್ತಡ ಜಾಸ್ತಿಯಾಗುತ್ತಿದೆ. ಅವರ ಸಾಲದ ಮರುಪಾವತಿಗಾಗಿಯೇ ಈ ನೀತಿಯನ್ನು ನಮ್ಮ ಕೇಂದ್ರಸರಕಾರ ಅನುಸರಿಸುತ್ತಿದೆ. ಹೀಗಾಗಿ ಸಮತಾವಾದಿ ದೇಶಗಳೊಡನೆ ಆಮದು-ರಫ್ತಿನ ವ್ಯವಹಾರ ಬೆಳೆಯುತ್ತಿಲ್ಲ. ಇಂತಹ ಬಲಾತ್ಕಾರದ ರಫ್ತುಗಳು ಮತ್ತು ಪಾಶ್ಚಿಮಾತ್ಯ ದೇಶಗಳ ಮೇಲಿನ ಅವಲಂಬನೆ ದೇಶವನ್ನು ಲೂಟಿ ಮಾಡಲು ಅತ್ಯಾವಶ್ಯಕ ವಸ್ತುಗಳ ಬೆಲೆಗಳನ್ನು ಹೆಚ್ಚಿಸಲು ಅನುವುಮಾಡಿ ಕೊಡುತ್ತಿದೆ.

ವಿಶ್ವ ಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿಗಳು ನಮ್ಮ ಅರ್ಥ ವ್ಯವಸ್ಥೆಯಲ್ಲಿ ನಡೆಸುತ್ತಿರುವ ನೇರ ಕೈವಾಡ ಹೆಚ್ಚಾಗುತ್ತಿದೆ. ಆಹಾರ ಧಾನ್ಯಗಳಿಗೆ ಕೊಡುತ್ತಿರುವ ಸಹಾಯ ಧನವನ್ನು ರದ್ದು ಮಾಡಬೇಕೆಂದೂ, ಜನರ ಜೀವನ ಮಟ್ಟವನ್ನು ಕಡಿತಗೊಳಿಸಬೇಕೆಂದೂ ವಿಶ್ವ ಬ್ಯಾಂಕ್ ಕರಾರು ಹಾಕಿದೆ. ಯೋಜನೆಗಳಿಗೆ ಹಣ ಪಡೆಯಲು ವಾಣಿಜ್ಯ ಸಾಲಗಳ ಮೊರೆ ಹೋಗಬೇಕೆಂದು ವಿಶ್ವ ಬ್ಯಾಂಕ್ ಒತ್ತಾಯಿಸುತ್ತಿದೆ. ಆಮದು ನೀತಿಯನ್ನು ಬಿಟ್ಟುಕೊಟ್ಟು ರಫ್ತು ನೀತಿಯನ್ನನುಸರಿಸಬೇಕೆಂದೂ ಹೇಳುತ್ತಿದೆ. ಹಾಗೆಯೇ ಹೊಸ ಕಾರ್ಖಾನೆಗಳ ರಚನೆಗಾಗಿ ಬಹುರಾಷ್ಟ್ರೀಯ ಮತ್ತು ವಿದೇಶಿ ಬಂಡವಾಳಗಳಿಗೆ ಅನಿರ್ಬಂಧ ಸ್ವಾಗತ ನೀಡಬೇಕೆಂದೂ ಒತ್ತಾಯ ಮಾಡುತ್ತಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ ರೂ. 5000ಕೋಟಿ ಸಾಲ ಪಡೆದಾಗ, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಹಂಚುತ್ತಿರುವ ಪದಾರ್ಥಗಳ ಸಹಾಯಧನವನ್ನು ರದ್ದುಪಡಿಸಬೇಕೆಂದೂ, ಜನರ ಜೀವನ ಮಟ್ಟವನ್ನು ಇಳಿಸಬೇಕೆಂದೂ ಸರಕಾರಿ

(8ನೇ ಪುಟ ನೋಡಿ)

ಶ್ರೀಲಂಕಾ ಹತ್ಯಾಕಾಂಡ - ಪೊಲಿಟ್‌ಬ್ಯೂರೋ ಖಂಡನೆ

ಶ್ರೀಲಂಕಾದಲ್ಲಿ ತಮಿಳು ಭಾಷಿಕರ ಮೇಲೆ ನಡೆದಿರುವ ಅಪಾರ ಹತ್ಯಾಕಾಂಡವನ್ನು ಪೊಲಿಟ್ ಬ್ಯೂರೋ ಖಂಡಿಸುತ್ತದೆ ಮತ್ತು ಅಗಾಧ ಚಿಂತೆನೆಯನ್ನು ವ್ಯಕ್ತ ಮಾಡುತ್ತದೆ. ಈ ಹತ್ಯಾಕಾಂಡಕ್ಕೆ ಶ್ರೀಲಂಕಾ ಸರಕಾರವೇ ಸಂಪೂರ್ಣ ಜವಾಬ್ದಾರಿಯೆಂದೂ ಪರಿಗಣಿಸುತ್ತದೆ. ನಾಗರೀಕರ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತವರೇ ಇಂಥ ಭೀಕರ ಹತ್ಯಾಕಾಂಡದಲ್ಲಿ ಪಾಲ್ಗೊಂಡಿದ್ದಾರೆಂಬ ಸಂಗತಿ ವರದಿಗಳಿಂದ ತಿಳಿದು ಬರುತ್ತದೆ. ಜಾಫನಾದಿಂದ ಕೊಲೊಂಬೋಗೆ ಹೋಗುತ್ತಿದ್ದ ಬಸ್ಸಿನಲ್ಲಿದ್ದ ಎಲ್ಲ ಪ್ರಯಾಣಿಕರನ್ನೂ ಕೊಲೆಮಾಡಲಾಯಿತೆಂದೂ, ಕೊಲೊಂಬೋದಲ್ಲಿಯೇ ನೂರಾರು ಜನರನ್ನು ಕೊಲ್ಲಲಾಗಿದೆಂದೂ, ಸಾವಿರಾರು ಮಂದಿಯನ್ನು ನಿರಾಶ್ರಿತರನ್ನಾಗಿ ಮಾಡಲಾಗಿದೆಯೆಂಬ ಸುದ್ದಿ ಪ್ರಕಟವಾಗಿದೆ.

ಪ್ರಜಾಪ್ರಭುತ್ವ ರೀತಿಯಲ್ಲಿ ತಮಿಳು ಭಾಷಿಕರ ಸಮಸ್ಯೆಯನ್ನು ಈಗಿರುವ ಸರಕಾರ ಪರಿಹರಿಸಿದ್ದಿದ್ದರೆ ಇಂಥ ಚಿಂತಾದಾಯಕ ಘಟನೆಗಳು ಸಂಭವಿಸುತ್ತಿರಲಿಲ್ಲ. ತಮಿಳು ಮಾತಾಡುವ ಜನರಿರುವ ಪ್ರದೇಶಕ್ಕೆ ಪ್ರತ್ಯೇಕ ಸ್ವಾಯತ್ತಾಧಿಕಾರ ಕೊಟ್ಟು, ಅಲ್ಪಭಾಷಿಕರಿಗೆ ತಮ್ಮ ಸಂಸ್ಕೃತಿ ಮತ್ತು ಭಾಷೆಗೆ ಸಂಪೂರ್ಣ ರಕ್ಷಣೆ ನೀಡುವ ಆಶ್ವಾಸನೆಯನ್ನು ಕೊಟ್ಟಿತ್ತು ಶ್ರೀಮತಿ ಬಂಡಾರನಾಯಕೆ ಸರಕಾರ. ಈ ಆಶ್ವಾಸನೆಗಳನ್ನು ಪೂರೈಸುವುದರಲ್ಲಿ ಈಗಿನ ಸರಕಾರ ವಿಫಲವಾಗಿದೆ. ಅಲ್ಪ ಮತಸ್ಥರ ಮೇಲೆ ದಂಗೆ ಏಳುವಂತೆ ಬಹುಮತೀಯರನ್ನು ಪ್ರಚೋದಿಸುವುದನ್ನು ಬಿಟ್ಟು, ಅಲ್ಪಮತೀಯರ ಸಮಸ್ಯೆ ಪರಿಹರಿಸಲಿಕ್ಕೆ ಬೇರೆ ಯಾವ ಮಾರ್ಗವನ್ನೂ ಬಂಡವಾಳಶಾಹಿ-ಭೂಮಾಲಕ ಸರಕಾರಗಳು ಅನುಸರಿಸುತ್ತಿಲ್ಲೆಂದು ಪಾಲಿಟ್‌ಬ್ಯೂರೊ ಜನತೆಯನ್ನು ಎಚ್ಚರಿಸುತ್ತದೆ. ಶ್ರೀಲಂಕಾದಲ್ಲಿಯೂ ಇದೇ ನಡೆಯುತ್ತಿದೆ. ಅಲ್ಪ ಭಾಷಿಕರು ನ್ಯಾಯಕ್ಕಾಗಿ ನಡೆಸುತ್ತಿರುವ ಹೋರಾಟವು ಆರ್ಥಿಕ ವಿಮೋಚನೆ ಹಾಗೂ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಆಗಿರುತ್ತದೆ. ಯಾವ ಜಾತಿಗೆ ಸೇರಿದವರಾಗಿದ್ದರೂ ಕೂಡ ಶ್ರೀಲಂಕಾದಲ್ಲಿರುವ ಪ್ರಜಾಪ್ರಭುತ್ವ ಶಕ್ತಿಗಳೆಲ್ಲ, ದೇಶದ ಐಕ್ಯತೆಯನ್ನು ಕಾಪಾಡಲು, ಅಲ್ಪ ಮತಸ್ಥರಿಗೆ ನ್ಯಾಯ ಕೊಡಿಸಲು, ಜನತೆಯ ಆರ್ಥಿಕ ಪರಿಸ್ಥಿತಿಯ ಮುಂದುವರಿಕೆಗಾಗಿ ಒಂದಾಗುವುದು ಅತ್ಯಗತ್ಯ.

ಸಂಪಾದಕೀಯ :

ಶ್ರೀಲಂಕಾದಲ್ಲಿ ಹತ್ಯಾಕಾಂಡ

ಅಮೇರಿಕದ ಸಾಮ್ರಾಜ್ಯಶಾಹಿಗಳು ಬಂಡವಾಳಶಾಹಿ ಭೂಮಾಲಿಕ ವರ್ಗದ ಸರಕಾರದ ಸಹಾಯದಿಂದ ಜಾತಿ, ಭಾಷೆ ಅಲ್ಪಸಂಖ್ಯಾಕರು ಮುಂತಾದ ಹೆಸರಲ್ಲಿ ಅಶಾಂತಿ ಉಂಟುಮಾಡಿ ನರಹತ್ಯೆ, ಆಸ್ತಿನಾಶ ಹಾಗೆಯೇ ಗುಂಪುಗಳೊಳಗೆ ದ್ವೇಷಾಸೂಯೆ ಹುಟ್ಟಿಸುತ್ತ ಬಂದಿದ್ದಾರೆ ಯಾಕಂದರೆ ಅಂಥ ದೇಶಗಳ ಮೇಲೆ ತಮ್ಮ ಪ್ರಭುತ್ವ ಖಾಯಂ ಉಳಿಸಬೇಕೆಂಬ ದುರುದ್ದೇಶದಿಂದ!

ಕಾ॥ ಇಂದ್ರಜಿತ ಗುಪ್ತಾ (ಸಿಪಿಐ) ಮತ್ತು ಪ್ರೊ॥ ಸತ್ಯಸಾಧನ ಚಕ್ರವರ್ತಿ (ಸಿಪಿಐ ಎಂ) ಇವರು ಲೋಕಸಭೆಯಲ್ಲಿ ಭಾಷಣ ಮಾಡುತ್ತಾ, ಶ್ರೀ ಲಂಕಾದಲ್ಲಿಯ ಹತ್ಯಾಕಾಂಡದಲ್ಲಿ ಅಮೇರಿಕದ ಸಾಮ್ರಾಜ್ಯಶಾಹಿಗಳ ಕೈವಾಡವಿದೆ ಎಂದೂ, ಆ ಪ್ರದೇಶದಲ್ಲಿ ಗೊಂದಲ ಹುಟ್ಟಿಸುವ ದುರುದ್ದೇಶದಿಂದಲೇ ತಮಿಳರ ವಿರುದ್ಧ ಹಿಂಸಾಚಾರ ನಡೆಸಲಾಗುತ್ತಿದೆಂಬ ಆರೋಪ ಹೊರಿಸಿದ್ದಾರೆ.

ಶ್ರೀಲಂಕಾದಲ್ಲಿ ನೆಲೆಸಿರುವ ತಮಿಳು ಭಾಷಿಕರ ಪ್ರಶ್ನೆ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಅದರ ಸಮರ್ಪಕ ಪರಿಹಾರಕ್ಕೆ ಶ್ರೀಲಂಕಾ ಸರಕಾರ ಪ್ರಯತ್ನಮಾಡಿಲ್ಲ. ಈ ಹಿಂದೆ ಶ್ರೀಮತಿ ಬಂಡಾರ ನಾಯಿಕೆ ಸರಕಾರ ಇದ್ದಾಗ, ಭಾರತ ಸರಕಾರದ ಜೊತೆ ಚರ್ಚೆ ಮಾಡಿ ತಮಿಳರ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಪ್ರಯತ್ನ ನಡೆದಿತ್ತು. ಜಯವರ್ಧನೆ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ಇದು ಸ್ಫೋಟಗೊಂಡಿದೆ. ಹೋದ ತಿಂಗಳ 24ರಿಂದ ಪ್ರಾರಂಭವಾದ ದಂಗೆಯಲ್ಲಿ ನೂರಾರು ತಮಿಳ ಭಾಷಿಕರು ಕೊಲ್ಲಲ್ಪಟ್ಟಿರುವುದಲ್ಲದೆ, ಅಪಾರ ಆಸ್ತಿ ಹಾನಿಯಾಗಿದೆ. ಲಕ್ಷಾವಧಿ ಜನ ನಿರಾಶ್ರಿತರಾಗಿದ್ದಾರೆ. ಶ್ರೀಲಂಕಾದಲ್ಲಿ ತಮಿಳರ ಮೇಲೆ ನಡೆಯುತ್ತಿರುವ ಅತ್ಯಾಚಾರ ಎಲ್ಲ ಪ್ರಜ್ಞಾವಂತ ನಾಗರೀಕರಿಗೆ ಸವಾಲಾಗಿ ಎದ್ದು ನಿಂತಿದೆ.

(8ನೇ ಪುಟ ನೋಡಿ)

ಸೋವಿಯತ್ ಯೂನಿಯನ್‌ನಲ್ಲಿ ಕೃಷಿಯ ಸ್ಥಾನ

ಯಾವುದೇ ರಾಷ್ಟ್ರೀಯ ಆರ್ಥಿಕದಲ್ಲಿ ಕೃಷಿಕ್ಷೇತ್ರವು ಆಯಕಟ್ಟಿನ ಕ್ಷೇತ್ರವಾಗಿದೆ. ಒಂದು ಸಮಾಜವಾದಿ ಸಮಾಜದಲ್ಲಿ ಸಾಮಾಜಿಕ ಉತ್ಪಾದನೆಯ ಪ್ರಮುಖ ಗುರಿಯ ಸಾಧನೆಯು—ಜನತೆಯ ಬೆಳೆಯುತ್ತಾ ಹೋಗುತ್ತಿರುವ ಅವಶ್ಯಕತೆಯ ಸಂಪೂರ್ಣ ಪೂರೈಸುವ ಸಾಧ್ಯತೆಯು—ಕೃಷಿಯ ಬೆಳವಣಿಗೆಯೊಡನೆ ನೇರವಾಗಿ ಸಂಬಂಧಿಸಿದೆ. ರಷ್ಯಾದಲ್ಲಿ ಕೃಷಿ ಉತ್ಪಾದನೆಯು ತನ್ನ ದೊಡ್ಡ ಪ್ರಮಾಣ ಮತ್ತು ಉನ್ನತ ಶ್ರೇಣಿಯ ಕೇಂದ್ರೀಕರಣಕ್ಕೆ ಪ್ರಸಿದ್ಧಿಯಾಗಿದೆ.

ಕೃಷಿ ಪ್ರದೇಶಗಳ ವಿವರಗಳು

(ಇತ್ತೀಚಿಗಿನ ಅಂಕಿ-ಸಂಖ್ಯೆಗಳು)

	ಮಿಲಿಯನ್ ಹೆಕ್ಟರುಗಳು	ತಲಾ (ಹೆಕ್ಟಾರ್)
ರಷ್ಯಾ	217.3	0.82
ಚೈನಾ	154.0	0.16
ಭಾರತ	138.3	0 16
ಅಮೇರಿಕಾ	136.8	0.61
ಬ್ರೆಜಿಲ್	31.0	0.26
ಕೆನಡಾ	20.0	0 84
ಫ್ರಾನ್ಸ್	16.8	0.30
ಪೋಲೆಂಡ್	14.5	0 41
ಆಸ್ಟ್ರೇಲಿಯಾ	14'1	0.98
ಅರ್ಜೆಂಟೈನ	11.0	0.41

ನೀರಾವರಿ ಪ್ರದೇಶಗಳು

(ಮಿಲಿಯ ಹೆಕ್ಟಾರುಗಳಲ್ಲಿ)

ಜಗತ್ತಿನಲ್ಲಿ	230.1
ಚೀನಾ	85.2
ಭಾರತ	35.2
ರಷ್ಯಾ	17.5
ಅಮೇರಿಕಾ	16 7
ಪಾಕಿಸ್ತಾನ	13.7
ಇರಾನ್	5 8
ಇಂಡೋನೇಶಿಯಾ	5.3
ಮೆಕ್ಸಿಕೊ	5.0
ಜಪಾನ್	3.3
ಇಟಲಿ	2.9

ಟ್ರಾಕ್ಟರುಗಳ ಸಂಖ್ಯೆ

(ಮಿಲಿಯನ್‌ಗಳಲ್ಲಿ)

ಅಮೇರಿಕಾ	4.3
ರಷ್ಯಾ	2.6
ಎಫ್.ಆರ್.ಜಿ	1.5
ಫ್ರಾನ್ಸ್	1.4
ಇಟಲಿ	0.9
ಕೆನಡಾ	0.6
ಪೋಲೆಂಡ್	0.6
ಬ್ರಿಟನ್	0.5
ಸ್ವೀಡನ್	0.4
ಜಪಾನ್	0 4

1980ರಲ್ಲಿ ರಷ್ಯಾದಲ್ಲಿ 722ಸಾವಿರ ಧಾನ್ಯ ಕೊಯ್ಯುವ ಯಂತ್ರಗಳಿದ್ದು ಜಗತ್ತಿನಲ್ಲಿ 1ನೇ ಸ್ಥಾನವನ್ನು ಹೊಂದಿತ್ತು. ಅಮೇರಿಕಾದಲ್ಲಿ 600 ಸಾವಿರವಿದ್ದು ಅದು ಎರಡನೇ ಸ್ಥಾನವನ್ನು ಪಡೆದಿತ್ತು. ಜಪಾನ್ 3ನೇ ಸ್ಥಾನದಲ್ಲಿದ್ದು 344 ಸಾವಿರ ಹೊಂದಿತ್ತು.

ರಷ್ಯಾ ಮತ್ತು ಅಮೇರಿಕಾದಲ್ಲಿ ಸಾಮೂಹಿಕ ಕೃಷಿಕ್ಷೇತ್ರಗಳ ತುಲನಾತ್ಮಕ ವಿವರಗಳು

	ಬೆಳೆಯುವ ಪ್ರದೇಶಗಳು (ಹೆಕ್ಟರಂಗಳಲ್ಲಿ)	ಟ್ರಾಕ್ಟರುಗಳು	ಪಶುಗಳು	ಹಂದಿ	ಕುರಿ ಮತ್ತು ಆಡುಗಳು
ತಲಾ ಸಾಮೂಹಿಕ ಕೃಷಿ ಕ್ಷೇತ್ರ	3700	41	1800	1100	1800
ಅಮೇರಿಕಾ	49	2	48	26	5

1922–1981ರಲ್ಲಿ, ಅಂದರೆ, ಸಂಯುಕ್ತ ಸಮಾಜವಾದಿ ರಾಷ್ಟ್ರಗಳ ರಚನೆಯ ನಂತರದ ಕಾಲಘಟ್ಟದಲ್ಲಿ, ರಾಷ್ಟ್ರದ ಕೃಷಿ ಉತ್ಪನ್ನವು ಒಟ್ಟು ಐದು ಪಾಲಷ್ಟು ಅಧಿಕಗೊಂಡಿದೆ. ಆಹಾರದ ಕೆಲೊರಿಯ ಆಧಾರದಲ್ಲಿ, ಸೋವಿಯಟ್ ಜನತೆಯ ಪೌಷ್ಟಿಕ ಆಹಾರವು ಅಂಗೀಕೃತ ದೈಹಿಕ ಪ್ರಮಾಣಗಳಿಗನುಸಾರವಾಗಿದೆ. ಜಗತ್ತಿನ ಮುಂದುವರಿದ 10 ರಾಷ್ಟ್ರಗಳ ಕೃಷಿ ಉತ್ಪನ್ನಗಳ ವಿವರಗಳು ಹೀಗಿವೆ :

೧೯೮೦ರಲ್ಲಿ ಧಾನ್ಯಉತ್ಪತ್ತಿ

(ಮಿಲಿಯ ಟನ್‌ಗಳು)

ಜಗತ್ತು	1570
ಚೀನಾ	283.3
ಅಮೆರಿಕಾ	270.0
ರಷ್ಯಾ	189.1
ಭಾರತ	144.9
ಫ್ರಾನ್ಸ್	47.8
ಕೆನಡಾ	40.8
ಬ್ರೇಜಿಲ್	33.1
ಇಂಡೋನೇಶಿಯಾ	32.3
ಟರ್ಕಿ	25.6
ಎಫ್.ಆರ್.ಜಿ	23.2

1980ರಲ್ಲಿ ತಲಾ ಧಾನ್ಯ ಉತ್ಪಾದನೆಯಲ್ಲಿ ರಷ್ಯವು 8ನೇ ಸ್ಥಾನವನ್ನು ಹೊಂದಿತ್ತು. (712 ಕಿಜಿ ತಲಾ).

ಜಗತ್ತಿನಲ್ಲಿ ರಷ್ಯಾವು ಬೀಟ್‌ಸಕ್ಕರೆ, ಸೂರ್ಯಕಾಂತಿ ಕಾಳುಗಳು, ಒಟಾಟಿ ಮತ್ತು ಫ್ಲೇಕ್ಸ್ (ನಾರು) ಗಳಲ್ಲಿ ಒಂದನೇ ಸ್ಥಾನದಲ್ಲಿದೆ.

೧೯೮೦ರಲ್ಲಿ ಹತ್ತಿಯ ಉತ್ಪತ್ತಿ

(ಮಿಲಿಯ ಟನ್ನುಗಳಲ್ಲಿ)

ಜಗತ್ತು	14.0
ರಷ್ಯಾ	3.0
ಅಮೇರಿಕಾ	2.4
ಚೀನಾ	2.2
ಭಾರತ	1.3
ಪಾಕಿಸ್ತಾನ	0.7
ಬ್ರೆಜಿಲ್	0.6
ಟರ್ಕಿ	0.5
ಈಜಿಪ್ಟ	0.5
ಮೆಕ್ಸಿಕೊ	0.3
ಅರ್ಜೆಂಟೈನಾ	0.2

೧೯೮೦ರಲ್ಲಿ ತರಕಾರಿ ಉತ್ಪತ್ತಿ

(ಮಿಲಿಯ ಟನ್ನುಗಳಲ್ಲಿ)

ಜಗತ್ತು	348
ಚೀನಾ	77.6
ಭಾರತ	38.9
ರಷ್ಯಾ	27.4
ಅಮೇರಿಕಾ	23.4
ಜಪಾನ್	14.5
ಇಟಲಿ	14.2
ಟರ್ಕಿ	11.9
ಸ್ಪೈನ್	8 1
ಈಜಿಪ್ಟ	7.2
ಫ್ರಾನ್ಸ್	6 9

೧೯೮೦ರಲ್ಲಿ ಮಾಂಸದ ಉತ್ಪತ್ತಿ

(ಮಿಲಿಯ ಟನ್ನುಗಳಲ್ಲಿ)

ಜಗತ್ತು	143
ಅಮೇರಿಕಾ	26.7
ರಷ್ಯಾ	15.0
ಫ್ರಾನ್ಸ್	5.8
ಎಫ್.ಆರ್.ಜಿ.	5.4
ಬ್ರೇಜಿಲ್	4.7
ಅರ್ಜೆಂಟೈನಾ	3.7
ಇಟಲಿ	3.5
ಬ್ರಿಟನ್	3.4
ಪೋಲೆಂಡ್	3.1
ಜಪಾನ್	3.0

ರಷ್ಯಾವು ಮಾಂಸದ ಉತ್ಪತ್ತಿಯಲ್ಲಿ ಒಂದನೇ ಸ್ಥಾನದಲ್ಲಿಲ್ಲ, 1980ರಲ್ಲಿ ಇದು 5.6 ಕಿಜಿ ತಲಾವಾಗಿದ್ದು (16ನೇ ಸ್ಥಾನದಲ್ಲಿತ್ತು).

೧೯೮೦ರಲ್ಲಿ ಹಾಲಿನ ಉತ್ಪನ್ನ

(ಮಿಲಿಯ ಟನ್ನುಗಳಲ್ಲಿ)

ಜಗತ್ತು	470
ರಷ್ಯಾ	90.6
ಅಮೇರಿಕಾ	58 3
ಫ್ರಾನ್ಸ್	35.4
ಎಫ್.ಆರ್.ಜಿ.	25.0
ಪೋಲೆಂಡ್	16.5
ಬ್ರಿಟನ್	16.0
ಇಟಲಿ	12.5
ನೆಧರ್‌ಲ್ಯಾಂಡ್ಸ್	11.8
ಬ್ರೇಜಿಲ್	10 5
ಭಾರತ	10.0

1980ರಲ್ಲಿ ರಷ್ಯಾದಲ್ಲಿ ತಲಾ ಹಾಲಿನ ಉತ್ಪನ್ನ 341 ಕಿಜಿ (ಜಗತ್ತಿನಲ್ಲಿ 8ನೇ ಸ್ಥಾನ) ; ಮೊಟ್ಟೆ ಉತ್ಪತ್ತಿ 251 (10ನೇ ಸ್ಥಾನ).

ಕೃಷಿ ಉತ್ಪನ್ನಗಳನ್ನು ನವೀಕರಿಸಲು ಅಧಿಕ ಶಕ್ತಿ ಸಾಮರ್ಥ್ಯದ ಕೈಗಾರಿಕಾ ಅನುಕೂಲತೆಗಳು ರಷ್ಯಾದಲ್ಲಿ ಏರ್ಪಾಡಾಗಿದೆ.

೧೯೮೦ರಲ್ಲಿ ಸಕ್ಕರೆಯ ಉತ್ಪನ್ನ

(ಮಿಲಿಯ ಟನ್ನುಗಳಲ್ಲಿ)

ಜಗತ್ತು	89.6
ರಷ್ಯಾ	10.1
ಬ್ರೇಜಿಲ್	7.6
ಕ್ಯೂಬಾ	6.3
ಅಮೆರಿಕಾ	4.7
ಭಾರತ	4.0
ಫ್ರಾನ್ಸ್	4.0
ಆಸ್ಟ್ರೇಲಿಯ	3.0
ಎಫ್.ಆರ್.ಜಿ	2.6
ಫಿಲಿಪೈನ್ಸ್	2.2
ಇಟಲಿ	1.7

೧೯೮೦ರಲ್ಲಿ ಬೆಣ್ಣೆಯ ಉತ್ಪನ್ನ

(ಸಾವಿರ ಟನ್ನುಗಳಲ್ಲಿ)

ಜಗತ್ತು	6,914
ರಷ್ಯಾ	1,373
ಭಾರತ	580
ಎಫ್ ಆರ್ ಜಿ	575
ಫ್ರಾನ್ಸ್	538
ಅಮೇರಿಕ	518
ಜಿ.ಡಿ.ಆರ್	280
ನ್ಯೂಜಿಲೆಂಡ್	253
ಪೋಲೆಂಡ್	253
ಪಾಕಿಸ್ತಾನ್	217
ನೆಧರ್‌ಲೆಂಡ್ಸ್	205

ಸಕ್ಕರೆ ಮತ್ತು ಬೆಣ್ಣೆ ಉತ್ಪನ್ನದಲ್ಲಿ ರಷ್ಯಾವು ಒಂದನೇ ಸ್ಥಾನದಲ್ಲಿದೆ ಮಾತ್ರವಲ್ಲ ವೆಜಿಟೇಬಲ್ ಎಣ್ಣೆ, ಹಾಲು ಮತ್ತು ಹಾಲಿನ ಉತ್ಪನ್ನಗಳು ವೈನುಗಳು, ಬ್ರೆಡ್ ಇತ್ಯಾದಿಯಲ್ಲಿ ರಷ್ಯಾವು ಪ್ರಥಮ. ರಷ್ಯಾವು ಉಣ್ಣೆ ಮತ್ತು ಲಿನೆನ್ ಉತ್ಪಾದನೆಯಲ್ಲಿ ಒಂದನೆ ಸ್ಥಾನದಲ್ಲಿದೆ ಮತ್ತು ಹತ್ತಿ ಬಟ್ಟೆ ಉತ್ಪಾದನೆಯಲ್ಲಿ ಎರಡನೇ ಸ್ಥಾನದಲ್ಲಿದೆ.

[ಕೃಷಿಯ ಉತ್ಪಾದನೆಯಲ್ಲಿ ಸಮಾಜವಾದೀ ರಾಷ್ಟ್ರಗಳು, ಅದರಲ್ಲೂ ರಷ್ಯಾವು ವಿಫಲವಾಗಿದೆ ಎಂದು ಸುಳ್ಳು ಪ್ರಚಾರಮಾಡುವ ಬಂಡವಾಳಶಾಹಿ ಏಜೆನ್ಸಿಗಳಿಗೆ ಇದು ಉತ್ತರ.— ಸಂಪಾದಕ.]

ಮೈಸೂರು ನಗರಸಭಾ ನೌಕರರ ಸಭೆ .

ದಿನಾಂಕ 25 7—83 ರಂದು ಮೈಸೂರು ಸಿಟಿ ಕಾರ್ಪೊರೇಷನ್ ಎಂಪ್ಲಾಯೀಸ್ ಯೂನಿಯನ್ನಿನ ಸರ್ವಸದಸ್ಯರ ಸಭೆಯು ಪುರಭವನದಲ್ಲಿ ಎಂ. ಎನ್. ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿ ಕಾ: ಸಿ. ಕೆ. ಮೋನ್‌ರವರು ಮಂಡಿಸಿದ ವಾರ್ಷಿಕ ವರದಿಯನ್ನು ಮತ್ತು 1982ನೇ ವರ್ಷದ ಲೆಕ್ಕ ಪತ್ರವನ್ನು ಒಪ್ಪಲಾಯಿತು. ಹಂಗಾಮಿ ಕೆಲಸಗಾರರನ್ನು ಖಾಯಂಗೊಳಿಸಬೇಕು ಜನ ಸಂಖ್ಯೆಯ ಆಧಾರದ ಮೇಲೆ ಹೆಚ್ಚಿನ ಪೌರ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳಬೇಕು, ವಸತಿ ಸೌಕರ್ಯ ಮಕ್ಕಳಿಗೆ ಪಾಠಶಾಲೆ ಅಗ್ಗದರದಲ್ಲಿ ಆಹಾರ ಪದಾರ್ಥಗಳ ವಿತರಣೆ ಇತ್ಯಾದಿ ಬೇಡಿಕೆಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಮತ್ತು ಮುಂದಿನ ಸಾಲಿಗೆ ಕಾರ್ಪೊರೇಟರುಗಳಾದ ಎಂ. ಎನ್. ಉಗ್ರಪ್ಪ ಅಧ್ಯಕ್ಷ, ಚಿಕ್ಕಮಾರ (ಉಪಾಧ್ಯಕ್ಷ) ಸಿ.ಕೆ' ಮೋನ್ ಗೌರವ ಕಾರ್ಯದರ್ಶಿ ರಾಮಚಂದ್ರು ಜಂಟಿ ಕಾರ್ಯದರ್ಶಿಗಳಾಗಿದ್ದು 21 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಮಂಗಳೂರು

ಸಾಮೂಹಿಕ ಪಿಕೇಟಿಂಗ್ ಯಶಸ್ವಿಗೊಳಿಸಲು ರೈತ ಸಂಘದ ಕರೆ

ಆಗಸ್ಟ್ ತಿಂಗಳ ದಿನಾಂಕ 10 ಮತ್ತು 11 ರಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ನಡೆಯಲಿರುವ ಬೆಲೆ ಏರಿಕೆ ವಿರೋಧಿ ಹೋರಾಟದ ಭಾಗವಾದ ಸಾಮೂಹಿಕ ಪಿಕೇಟಿಂಗ್‌ನಲ್ಲಿ ಭಾಗವಹಿಸಿ ಸಾವಿರಾರು ಮಂದಿ ಬಂಧನಕ್ಕೊಳಗಾಗಬೇಕೆಂದು ದಿನಾಂಕ 22ರಂದು ಕಾ। ಡೇವಿಡ್ ಎ. ಕರ್ಕಡರ ಅಧ್ಯಕ್ಷತೆಯಲ್ಲಿ ಜರಗಿದ ದ. ಕ. ಜಿಲ್ಲಾ ರೈತ ಸಂಘದ ಸಭೆಯಲ್ಲಿ ಕರೆ ನೀಡಲಾಯಿತು.

ಪ್ರಧಾನ ಕಾರ್ಯದರ್ಶಿ ಕಾ। ಯು. ಜನಾರ್ಧನ ನಾಯ್ಕರು ಸಂಘಟನಾ ಭಾಗದ ವರದಿ ಮತ್ತು ಲೆಖ್ಖ ಪತ್ರವನ್ನು ಸಭೆಯ ಮುಂದಿಟ್ಟರು.

ವರದಿಯ ಮೇಲಿನ ಚರ್ಚೆಯಲ್ಲಿ ಕಾಮ್ರೇಡರುಗಳಾದ ಬಿ. ವಿಷ್ಣುಮೂರ್ತಿ ಬಿ. ವಾಸುಗಟ್ಟಿ ರಾಮಯ್ಯ ಗೌಢ, ಬಿ. ಚಂದ್ರ, ರಾಮಕುಂದರ್, ಬಿ. ಹೊನ್ನಯ್ಯ ದೇವಾಡಿಗ್ ರಾಮನಾರಾಯಣ ಚಂದ್ರ, ಉಚ್ಚಿಲ್ ಮೊದಲಾದವರು ಭಾಗವಹಿಸಿದರು.

ಎಸ್.ಎಫ್.ಐ. ನಿಂದ ಪ್ರದರ್ಶನ, ಬಹಿರಂಗಸಭೆ

ದಿ: 1 8 83ರಂದು ರಾಜ್ಯಾದ್ಯಂದ ನಡೆದ ಎಸ್. ಎಫ್, ಐ. ಬೇಡಿಕೆ ದಿನಾಚರಣೆ ಅಂಗವಾಗಿ ಹೊಸಪೇಟೆ ನಗರಸಮಿತಿ ವಿಜಯನಗರ ಕಾಲೇಜು ಎದುರುಗಡೆ ಮತಪ್ರದರ್ಶನ ಬಹಿರಂಗ ಸಭೆ ನಡೆಸಿತು. ಸಭೆಯ ಪ್ರಾರಂಭದಲ್ಲಿ ಮಾತನಾಡಿದ ಕಾಂ॥ ವಿರೂಪಾಕ್ಷ ನಾಯಕ್ ಅವರು ಪ್ರತಿಯೊಂದು ಶಾಲಾ-ಕಾಲೇಜುಗಳಲ್ಲಿ 'ವಿದ್ಯಾರ್ಥಿ ಸಂಘ' ವನ್ನು ರಚಿಸಿಕೊಳ್ಳುವ ಅವಕಾಶ ನೀಡಬೇಕೆಂದು ಒತ್ತಾಯಿಸಿದರು.

ನಂತರ ಧ್ವಜಾರೋಹಣ ಹಾಗೂ ಉದ್ಘಾಟನಾ ಭಾಷಣದಲ್ಲಿ ಕಾಂ। ಪಾಂಡುರಂಗ ಮಾತನಾಡಿದರು. ಬೇಡಿಕೆ ದಿನಾಚರಣೆ ಬಗ್ಗೆ ಮಾತನಾಡಿದ ಬಳ್ಳಾರಿ ಜಿಲ್ಲಾ ಎಸ್. ಎಫ್. ಐ. ಪ್ರಧಾನ ಕಾರ್ಯದರ್ಶಿ ಕಾಂ॥ ಗುರು ಶಾಂತಪ್ಪನವರು ಡೊನೇಷನ್ ಫೀ ರದ್ದಾಗಬೇಕೆಂದು, ಬೆಲೆಯೇರಿಕೆಗನುಗುಣವಾಗಿ ವಿದ್ಯಾರ್ಥಿ ವೇತನ ಹೆಚ್ಚಳ, ಹೊಸಪೇಟೆ ಜ್ಯೂನಿಯರ್ ಕಾಲೇಜಿಗೆ ಪ್ರಿನ್ಸಿಪಾಲರ ನೇಮಕವಾಗಬೇಕೆಂದು ಬಳ್ಳಾರಿ ವೀರಶೈವ ಕಾಲೇಜಿನ ಆಡಳಿತ ವರ್ಗ ನಡೆಸಿದ ಹಣ ದುರುಪಯೋಗ ಕುರಿತು ತೀವ್ರ ತನಿಖೆಯಾಗಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು. ಕೊನೆಯದಾಗಿ ಕಾ॥ ಕೋದಂಡರಾಮ್ ಅವರು ವಂದನಾರ್ಪಣೆ ಮಾಡಿದರು.

ಪಂಚಾಯತಿ ರಾಜ್ಯ ಲೇಖನ ಮಾಲೆ–೨

ಇ. ಎಂ. ಎಸ್. ರವರ ದೃಷ್ಟಿಯಲ್ಲಿ ಪಂಚಾಯಿತಿ ರಾಜ್ಯದ ರಚನೆ, ಕಾರ್ಯ, ಸಂಪನ್ಮೂಲಗಳು

ಎರಡು ಅಂತಸ್ತಿನ ಪಂಚಾಯತ್ ರಾಜ್ಯ ವ್ಯವಸ್ಥೆ

ಎರಡು ಅಂತಸ್ತಿನ ಪಂಚಾಯತ್ ರಾಜ್ ವ್ಯವಸ್ಥೆಯ ವಿಚಾರಕ್ಕೆ ನನ್ನ ಬೆಂಬಲವಿದೆ. ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತು ಎರಡು ಅಂತಸ್ತಿನ ಪದ್ಧತಿಯು ಕಡಿಮೆ ವೆಚ್ಚದ್ದಾಗಿದ್ದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆಯೆಂದು ಸಾಮಾನ್ಯವಾಗಿ ಪರಿಗಣಿಸಲಾಗಿದೆ. ಹಾಗೂ ಕೇರಳದಲ್ಲಿ ನನ್ನ ಸ್ವಂತ ಅನುಭವವೂ ಸಹ ಇದನ್ನು ಸಮರ್ಥಿಸುತ್ತದೆ.

ಆದರೆ ಕೆಲವು ರಾಜ್ಯಗಳಲ್ಲಿ ಜಿಲ್ಲಾ ಪರಿಷತ್ತಿನ ಕೆಳಗೆ ಒಂದಕ್ಕಿಂತ ಜಾಸ್ತಿ ಅಂತಸ್ತುಗಳಿರುವ ಬೇರೆ ಪ್ರಕಾರದ ವ್ಯವಸ್ಥೆಯಿದೆ. ಅಂತಹ ವ್ಯವಸ್ಥೆಯನ್ನಿಟ್ಟುಕೊಳ್ಳುವುದು ಅವಶ್ಯಕವೆಂದು ಆ ರಾಜ್ಯವು ಪರಿಗಣಿಸಿದರೆ ನಾವು ಮಾಡುವ ಶಿಫಾರಸುಗಳು ಅದಕ್ಕೆ ತಡೆಯಾಗಬಾರದು. ಆದರೂ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ಸಹಾಯವಾಗುವ ದೃಷ್ಟಿಯಿಂದ ಮೂರು ಅಂತಸ್ತಿನ ಪದ್ಧತಿಯನ್ನು ತೊರೆದು ಎರಡು ಅಂತಸ್ತಿನ ಪದ್ಧತಿಯನ್ನು ಅಳವಡಿಸುವ ಪ್ರಯತ್ನವನ್ನು ಮಾಡಬೇಕೆಂದು ಹೇಳಬೇಕಾಗುತ್ತದೆ.

ಪ್ರಮಾಣಾನುಪಾತ ಚುನಾವಣಾ ಪದ್ಧತಿ

ಜಿಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆಗೆ ಪ್ರಮಾಣಾನುಸಾರ ಪ್ರಾತಿನಿಧ್ಯವಿರುವಂತೆ (Proportion representation) ಲಿಸ್ಟ್ ಪದ್ಧತಿಯನ್ನು (List System) ಅಳವಡಿಸಬೇಕು. ವರದಿಯ ಪ್ರಕಾರ ಮಂಡಲ ಪಂಚಾಯತಿಗಳು ನೇರವಾಗಿ ಚುನಾಯಿತಗೊಂಡ 15 ಸದಸ್ಯರಿಂದ ಕೂಡಿರುವುದರಿಂದ, ಇಡೀ ಪಂಚಾಯಿತಿ ಪ್ರದೇಶವನ್ನೇ 15 ಸದಸ್ಯರ ಒಂದೇ ಮತದಾರ ಕ್ಷೇತ್ರವನ್ನಾಗಿ ಪರಿಗಣಿಸಬಹುದು. ಈ ಪದ್ಧತಿಯು 1/15 ಭಾಗದಷ್ಟು ಮತದಾರರ ಬೆಂಬಲವಿರುವ (ಶೇ. 7ರಷ್ಟು) ಪ್ರತಿಯೊಂದು ಸಾಮಾಜಿಕ ರಾಜಕೀಯ ಸಂಘಟನೆಗೆ ಕನಿಷ್ಟ ಒಬ್ಬ ಸದಸ್ಯನನ್ನು ಚುನಾಯಿಸಿ ಕಳುಹಿಸುವ ಸಾಧ್ಯತೆಯನ್ನು ಕಲ್ಪಿಸಿಕೊಡುತ್ತದೆ. ಲಿಸ್ಟ್ ಪದ್ಧತಿಯು ಕ್ಷೇತ್ರ ಚುನಾವಣಾ ಪದ್ಧತಿಗೆ ಪರಕೀಯವಾಗಿದೆ ಎಂದು ಅಶೋಕ್ ಮೆಹ್ತಾ ವರದಿಯಲ್ಲಿ ಹೇಳಿರುವುದು ನನಗೆ ಸರಿಯೆಂದು ಕಾಣಿಸುವುದಿಲ್ಲ. ಭಾರತದ ರಾಜಕೀಯ ಹಾಗೂ ರಾಜಕೀಯ ಪಕ್ಷಗಳ ಪರಿಸ್ಥಿತಿಯು ರಾಜ್ಯದ ಶಾಸನ ಸಭೆಗಳಿಗೂ ಮತ್ತು ಪಾರ್ಲಿಮೆಂಟಿಗೂ ಸಹ ಲಿಸ್ಟ್ ಪದ್ಧತಿಯನ್ನು ಅಳವಡಿಸುವ ಹಂತವನ್ನು ತಲುಪಿದ್ದು ಅದರಿಂದ ಇಂದು ಪರಿಹರಿಸಲು ಸಾಧ್ಯವೆಂದು ಪರಿಗಣಿಸಿರುವ ವಿಪ್ಲೋಟ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಸಂವಿಧಾನ ತಿದ್ದುಪಡಿಗೆ ನಾನು ಮಾಡಬೇಕಾಗಿರುವ ಸಲಹೆಗಳಲ್ಲಿ 'ಲಿಸ್ಟ್ ಪದ್ಧತಿ'ಯನ್ನು ಅಳವಡಿಸಬೇಕೆನ್ನುವುದೂ ಸಹ ಒಂದು.

ನಾಮಕರಣ ಸದಸ್ಯರು ಬೇಡ

ಜಿಲ್ಲಾ ಮಟ್ಟದ ಸಹಕಾರಿ ಪರಿಷತ್ತು, ಜಿಲ್ಲಾ ಪರಿಷತ್ತು ಮತ್ತು ಇತರೆ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ನಾಮಕರಣ ಮಾಡಿ ಸದಸ್ಯರನ್ನು ಸೇರಿಸುವ ಸಲಹೆಯನ್ನು ವಿರೋಧಿಸುತ್ತೇನೆ. ಪಂಚಾಯತ್ ರಾಜ್ ವ್ಯವಸ್ಥೆಯ ಎಲ್ಲಾ ಮಟ್ಟಗಳಲ್ಲೂ ಪೂರ್ತಿಯಾಗಿ ಚುನಾಯಿತಗೊಂಡ ಮಂಡಳಿಗಳು ಮಾತ್ರ ಇರಬೇಕು. ವರದಿಯಲ್ಲಿ ಸಲಹೆ ಮಾಡಿದಂತೆ ಚುನಾವಣೆಯಿಲ್ಲದೆ ಸದಸ್ಯರನ್ನು ನಾಮಕರಣ ಮಾಡುವುದೆಂದರೆ ಪಂಚಾಯತ್‌ರಾಜ್ ಸಂಸ್ಥೆಗಳು ಅಭಿವೃದ್ಧಿ ಕಾರ್ಯಗಳಿಗೆ ಮಾತ್ರ ಸಂಬಂಧಿಸಿವೆಯೆಂದೂ ಅವುಗಳು ಆಯಾ ಮಟ್ಟಗಳ ಚುನಾಯಿತ ಆಡಳಿತ ಸಂಸ್ಥೆಗಳಲ್ಲವೆಂದೂ ಹೇಳುವ ವಿಚಾರವಾಗಿದೆ.

ಕರ್ತವ್ಯಗಳು

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಭಿವೃದ್ಧಿ ಕಾರ್ಯ ಮತ್ತು ನಿಯಂತ್ರಣ ಕಾರ್ಯಗಳೆಂದು ಪ್ರತ್ಯೇಕಿಸದೆಯೇ ಸಮಗ್ರವಾಗಿ ಅಧಿಕಾರ, ಜವಾಬ್ದಾರಿಗಳನ್ನು ನೀಡಬೇಕೆಂದು ಮೇಲೆ ಹೇಳಿದ್ದೇನೆ. ಒಂದು ವೇಳೆ ಈಗಿನ ಪರಿಸ್ಥಿತಿಯಲ್ಲಿ ಕಾನೂನು ಮತ್ತು ಶಿಸ್ತು ಪಾಲನೆ ರಾಜ್ಯದ ಕೈಯಲ್ಲಿ ಮಾತ್ರವಿರಬೇಕೆಂದೂ ಜಿಲ್ಲಾ ಮತ್ತು ಮಂಡಲಿ ಪಂಚಾಯಿತಿಗಳೊಂದಿಗೆ ಹಂಚಿಕೆಯಾಗಬಾರದೆಂದೂ ವಾದಿಸಿದ್ದರೆ ಅರ್ಥ ಮಾಡಿಕೊಳ್ಳಬಹುದಾಗಿತ್ತು (ನನಗೆ ಭಿನ್ನಾಭಿಪ್ರಾಯವಿದ್ದೂ ಸಹ). ಆದರೆ "ಸಹಕಾರಿ ವ್ಯವಸ್ಥೆಯು ದಾಖಲಾತಿ ಕೆಲಸದಿಂದ ಹಿಡಿದು ಅನೇಕ ನಿಯಂತ್ರಣ ಕಾರ್ಯಗಳನ್ನು ಹೊಂದಿದೆ"ಎಂದು ವರದಿಯೇ ಹೇಳುವಾಗ 'ಸಾಮಾಜಿಕ ಶಾಸನ, ಕಾನೂನು ಮತ್ತು ಶಿಸ್ತುಪಾಲನೆ ಅಥವಾ ನಿಯಂತ್ರಣ ಕಾರ್ಯಗಳು ಕಲೆಕ್ಟರ್‌ನ ಕೈಯ್ಯಲ್ಲಿ ಮಾತ್ರವೇ ಇರಲಿ" ಎಂದು ಅದೇ ವರದಿ ವಾದಿಸುವುದು ಹೇಗೆ ಸಾಧ್ಯ? ಪಂಚಾಯತ್ ರಾಜ್ ಸಂಸ್ಥೆಗಳು ಎಲ್ಲಾ ನಿಯಂತ್ರಣ ಕಾರ್ಯಗಳಿಂದ ದೂರವಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಮಾತ್ರ ಸೀಮಿತಗೊಳ್ಳಬೇಕೆನ್ನುವ ಭೂತವೇ ಸಮಿತಿಯ ಸದಸ್ಯರನ್ನು ಕಾಡುತ್ತಿದೆ.

ಸಿಬ್ಬಂದಿ –

ಕೇಂದ್ರ ಮತ್ತು ಅಖಿಲ ಭಾರತ ಸೇವೆಗಳನ್ನೂ, ರಾಜ್ಯ ಸೇವೆಗಳನ್ನೂ ಸ್ಥಳೀಯ ಸೇವೆಗಳನ್ನೂ. ಬೇರೆ ಬೇರೆ ಸೇವಾ ಸೌಕರ್ಯ ಮತ್ತು ಸೇವಾ ಪರಿಸ್ಥಿತಿಗಳಿಂದ ಪ್ರತ್ಯೇಕಿಸಿದ ರೀತಿ ನೌಕರರ ಹೃದಯದಲ್ಲಿ ಕಿಚ್ಚು ಎಬ್ಬಿಸುವಂತಾಗಿದೆ. ಅಖಿಲ ಭಾರತ ಸೇವೆಗಳ ನೌಕರರು ರಾಜ್ಯ ನೌಕರರನ್ನು ಕೀಳಾಗಿ ಕಂಡರೆ ರಾಜ್ಯ ನೌಕರರು ಸ್ಥಳೀಯ ನೌಕರರನ್ನು ಅದೇ ರೀತಿಯಲ್ಲಿಯೇ ಕಾಣುತ್ತಾರೆ. ಈ ಪರಿಸ್ಥಿತಿಯನ್ನು ಕೊನೆಗೊಳಿಸಿ ಸರಕಾರಿ ನೌಕರರುಗಳಲ್ಲಿ ಏಕರೂಪತೆಯನ್ನು ತರುವುದು ಅತ್ಯಾವಶ್ಯಕ. ಇದರಿಂದ ಮಾತ್ರವೇ ಆಡಳಿತದಲ್ಲಿ ಸಮಗ್ರತೆಯನ್ನು ಕಾಪಾಡಿಕೊಳ್ಳಲು ಸಾಧ್ಯ.

ಸಂಪನ್ಮೂಲಗಳು –

ಹಣಕಾಸು ಸಂಪನ್ಮೂಲಗಳ ವಿಷಯದಲ್ಲಿಯೂ ಸಹ, ಇಡೀ ದೇಶದ ಹಣಕಾಸು ಸಂಪನ್ಮೂಲಗಳ ದೃಷ್ಟಿಯಿಂದಲೇ ಹೊಸದಾಗಿ ಪರಿಶೀಲಿಸುವುದು ತುರ್ತು ಅಗತ್ಯವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೈಯಲ್ಲಿರುವ ಸಂಪನ್ಮೂಲಗಳು ಕೆಳಗಿನ ಆಡಳಿತ ಸಂಸ್ಥೆಗಳಡಿಯಲ್ಲಿಯೂ ಬರುವಜನಗಳಿಗೇ ಸೇರಿರುವಂತಾದ್ದು.

ಸಂಗ್ರಹಾನುವಾದ:

ಜಿ. ಎನ್. ನಾಗರಾಜ್

ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಜಿಲ್ಲೆ, ಪಂಚಾಯಿತಿ ಮಟ್ಟಗಳಿಂದಲೇನೆಯೋ ಎಲ್ಲಾ ಸಂಪನ್ಮೂಲಗಳನ್ನು ಸಂಗ್ರಹಿಸಿದ ನಂತರ, ಪಂಚಾಯತ್ ರಾಜ್ ಸಂಸ್ಥೆಗಳು ಬೇರೆ ಸಂಪನ್ಮೂಲಗಳನ್ನು ಹುಡುಕಿಕೊಳ್ಳಬೇಕೆನ್ನುವುದು ಅವೈಚಾರಿಕವಾದದ್ದು.

ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಧನಸಹಾಯವನ್ನು, ಇತರೆ ರೂಪದ ಹಣಕಾಸು ಸಹಾಯವನ್ನು ಕೇಳಿ ಪಡೆದುಕೊಳ್ಳುವುದು ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಅವಮಾನಕರವಾದುದೇನೂ ಅಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಪಂಚಾಯತ್‌ರಾಜ್ ಸಂಸ್ಥೆಗಳೊಂದಿಗೆ ಕೂಡಿ ಸಮಗ್ರ ಆಡಳಿತದ ಹಣಕಾಸು ಸಂಪನ್ಮೂಲಗಳನ್ನು ಪರಿಶೀಲಿಸಿ ಸಂಗ್ರಹಿಸಬಹುದಾದ ಎಲ್ಲಾ ಸಂಪನ್ಮೂಲಗಳ ಸರಿಯಾದ ಸಂಗ್ರಹಣೆ ಮತ್ತು ವಿತರಣೆಯ ಬಗೆಗೆ ಒಮ್ಮತದಿಂದ ನಿರ್ಧರಿಸಬೇಕಾದುದು ಅತ್ಯಗತ್ಯ.

ಕರಭಾರ ಹೆಚ್ಚಿಸುವುದು ಸಲ್ಲ–

"ಕೆಲವೊಂದು ತೆರಿಗೆಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗಾಗಿ ನಿರ್ದಿಷ್ಟಪಡಿಸುವ ಅಗತ್ಯವಿದೆ"ಎಂದು ವರದಿ ಹೇಳಿದೆ. ಪಂಚಾಯತ್ ರಾಜ್ ಸಂಸ್ಥೆಗಳು ಕಡ್ಡಾಯವಾಗಿ ಹೇರಿ ಸಂಗ್ರಹಿಸಬಹುದಾದ ಕರಗಳು ಯಾವುವು ಎಂದರೆ, ಭೂಮೇಲ್ತೆರಿಗೆ, ಸ್ಟಾಂಪು ತೆರಿಗೆಯ ಮೇಲಿನ ಸರ್‌ಚಾರ್ಜ್, ವಾಣಿಜ್ಯ, ಬೆಳೆಗಳ ಮೇಲಿನ ಕರ ಮುಂತಾದವುಗಳು. ಇವೆಲ್ಲವೂ ಕೇಂದ್ರ ಮತ್ತು ರಾಜ್ಯಗಳು ಹೇರಿ ಸಂಗ್ರಹಿಸುವ ಕರಗಳಾದ ಮೇಲೆ ಮತ್ತೆ ಹೇರಲ್ಪಡುವುದರಿಂದ ಹಳ್ಳಿಯ ಜನತೆಯ ಮೇಲಿನ ಕರಭಾರವನ್ನು ಹೆಚ್ಚಿಸುತ್ತದೆ. ಆದ್ದರಿಂದ ಈ ತೆರಿಗೆಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಡ್ಡಾಯಗೊಳಿಸುವ ಸಲಹೆಯನ್ನು ನಾನು ಒಪ್ಪಲು ಸಾಧ್ಯವಿಲ್ಲ. ಆದ್ದರಿಂದ ನಿರ್ದಿಷ್ಟ ಜನವಿಭಾಗದ ಮೇಲೆ, ನಿರ್ದಿಷ್ಟ ಆಸ್ತಿ ಪದಾರ್ಥಗಳ ಮೇಲೆ ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲದೇ ಈಗ ಪಂಚಾಯತ್ ಸಂಸ್ಥೆಗಳು ಹೇರಬೇಕೆಂದಿರುವ ಕರಗಳ ಬಗ್ಗೆ ಹೊಸದಾಗಿ ಯೋಜಿಸಬೇಕಾಗಿರುವ ಕರಭಾರದಿಂದಲೇ ಪರಿಹಾರ ನೀಡಬೇಕೆಂದು ನ್ಯಾಯವಾಗಿ ಹಳ್ಳಿಯ ಬಡವರು ಕೇಳುತ್ತಿರುವಾಗಲೇ ಮತ್ತೆ ಕರಗಳನ್ನು ಹೇರುವುದು ಅವರ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತೆ.

ನ್ಯಾಯ ಪಂಚಾಯಿತಿಗಳು

ಚುನಾಯಿತ ನ್ಯಾಯ ಪಂಚಾಯತಿಗಳಿಗೆ ವಿದ್ಯಾರ್ಹತೆ ಇರುವ ನ್ಯಾಯಾಧೀಶನನ್ನು (ಅಧ್ಯಕ್ಷನನ್ನಾಗಿ) ನೇಮಿಸುವ ಶಿಫಾರಸನ್ನು ನಾನು ವಿರೋಧಿಸುತ್ತೇನೆ. ನ್ಯಾಯ ಪಂಚಾಯತಿಗಳಿಗೆ ಸ್ಫೂರ್ತಿದಾಯಕ ಬೆಂಬಲವಿಲ್ಲವೆಂದೂ, ಇದಕ್ಕೆ ಕಾರಣ ಚುನಾಯಿತ ಪಂಚರುಗಳು ವಾಸ್ತವವಾಗಿ ಬಡಜನರಿಗೆ ನ್ಯಾಯ ದೊರಕಿಸಿಕೊಡುತ್ತಾರೆಂದು ಜನರು ನಿರೀಕ್ಷಿಸುವುದಿಲ್ಲವೆಂದೂ ವರದಿಯು ಹೇಳುತ್ತದೆ. ನ್ಯಾಯಾಲಯವನ್ನು ಜನತೆಯ ಹತ್ತಿರಕ್ಕೆ ಕೊಂಡೊಯ್ಯುವ ಸಲಹೆಯನ್ನು ನ್ಯಾಯಾಲಯ ಪದ್ಧತಿಯ ಸುಧಾರಣೆಯ ಕ್ರಮದಿಂದಾಗಿ ಮಾತ್ರ ಪರಿಗಣಿಸಬೇಕೆ ವಿನಃ ಆಡಳಿತದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಭಾಗವಾಗಿಯಲ್ಲ. ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸುವ ಭಾಗವಾಗಿಯಲ್ಲದೇನೆಯೇ ಬದಲು ಪ್ರತ್ಯೇಕವಾಗಿಯೇ ಸರಕಾರವು ನಮ್ಮ ವರದಿಯಲ್ಲಿ ಅವಲೋಕಿಸಿದ ವಿವಿಧ ವರದಿಗಳನ್ನು ನ್ಯಾಯಾಲಯ ಪದ್ಧತಿ ಸುಧಾರಣೆಯ ಪರ್ಯಾಲೋಚನೆಗೆ ಉಪಯೋಗಿಸಿಕೊಳ್ಳಬಹುದು.

ಸಂಘಟನೆಯ ಪಾತ್ರ

ಹಳ್ಳಿಯ ಪ್ರದೇಶಗಳಲ್ಲಿ, ರಾಜಕೀಯಾತೀತವಾಗಿರದ, ರಾಜಕೀಯಾತೀತವಾಗಿರಲೂ ತಿರಸ್ಕರಿಸುವ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿರುವ ರೈತಸಂಘ, ಕೃಷಿಕಾರ್ಮಿಕರ ಸಂಘಟನೆ, ವಿದ್ಯಾರ್ಥಿ, ಯುವಜನರ, ಸ್ತ್ರೀಯರ ಸಂಘಟನೆಗಳಿವೆ ಎನ್ನುವ ಅಂಶಗಳನ್ನು ವರದಿಯು ಗಣನೆಗೆ ತೆಗೆದುಕೊಂಡಿರದೇ ಇರುವುದು ವಿಷಾದಕರ. ಈ ಅನೇಕ ಸಂಘಟನೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು ಜನತೆಯ ಬೆಂಬಲವನ್ನು ಹೊಂದಿವೆ. ಅಂತಹ ಸಂಘಟನೆಗಳು ಇರುವ ಕಡೆಗಳಲ್ಲಿ ಮಾನವ ಸಂಪನ್ಮೂಲದ ಬೆಳವಣಿಗೆಯಲ್ಲಿ ಅವುಗಳಿಗೆ ಪ್ರಾಮುಖ್ಯವಾದ ಸ್ಥಾನವನ್ನು ಪಾತ್ರವನ್ನು ನೀಡಬೇಕು.

ಕೊನೆಯಲ್ಲಿ ಈ ಎಲ್ಲಾ ಆಕ್ಷೇಪಣೆಗಳು ಟೀಕೆಗಳು, ಸಲಹೆಗಳು ಇದ್ದರೂ ಸಹ ವರದಿಯು ಅಂಗೀಕಾರಗೊಂಡು ಕಾರ್ಯರೂಪಕ್ಕೆ ಬಂದರೆ ಆಡಳಿತದ ಪ್ರಜಾಪ್ರಭುತ್ವೀಕರಣ ಮತ್ತು ವಿಕೇಂದ್ರೀಕರಣದತ್ತ ಮಹತ್ತರವಾದ ಮುನ್ನಡೆಯಾಗುತ್ತದೆಯೆಂದು ಮತ್ತೊಮ್ಮೆ ಒತ್ತಿ ಹೇಳಬಯಸುತ್ತೇನೆ.

ಪೋಲೀಸ್ ದೌರ್ಜನ್ಯವನ್ನು ಪ್ರತಿಭಟಿಸಿ ಕುಂದಾಪುರ ಯಶಸ್ವಿ ಬಂದ್

ಕಳ್ಳತನದ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಂದಾಪುರ ಪೋಲೀಸರು ಬಂಧಿಸಿ ವಶಕ್ಕಿರಿಸಿಕೊಂಡಿದ್ದ ಸಿನೆಮಾ ಗೇಟ್ ಕೀಪರ್ ಅಣ್ಣು ಬಾರ್ವಿ ಎಂಬುವನು ಪೋಲೀಸರ ಬಂಧನದಿಂದ ಬಿಡುಗಡೆಯಾದ ಮರೆದೇ ದಿನಗಳಲ್ಲಿ ಆಸ್ಪತ್ರೆಯಲ್ಲಿ ನಿಧನಹೊಂದಿದ ಪರಿಣಾಮವಾಗಿ ತಾ. 28–7–83ರಂದು ಪೋಲೀಸ್ ಹಿಂಸಾಚಾರದ ವಿರುದ್ಧ ಕುಂದಾಪುರದಲ್ಲಿ ಪಕ್ಷ–ಪಂಗಡಗಳ ಬೇಧವಿಲ್ಲದೇ ಸಾರ್ವತ್ರಿಕ ಪ್ರತಿಭಟನೆಯೊಂದಿಗೆ ಕುಂದಾಪುರ ಯಶಸ್ವಿ ಬಂದ್ ಆಗಿ ಮಾರ್ಪಟ್ಟಿತು.

ನ್ಯಾಯಾಂಗ ವಿಚಾರಣೆಗೆ ಒತ್ತಾಯ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕುಂದಾಪುರ ತಾಲ್ಲೂಕು ಸಮಿತಿ ತುರ್ತು ಸಭೆ ಜರುಗಿಸಿ, ಪೋಲೀಸ್ ದೌರ್ಜನ್ಯವನ್ನು ಖಂಡಿಸಿ, ಅಣ್ಣು ಪ್ರಕರಣದಲ್ಲಿ ತಕ್ಷಣ ನಿಷ್ಪಕ್ಷಪಾತ ತನಿಖೆಯಾಗಿ, ಸಂಬಂಧಿತ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸಿದೆ.

ವಿಧಾನಸಭೆಯ ಕಾರ್ಯಕಲಾಪಗಳ ಹಿನ್ನೋಟ

-ಪಿ. ರಾಮಚಂದ್ರರಾವ್

ಬಹಳ ಕಾಲದ ನಂತರ ಇದೀಗ ವಿಧಾನಸಭಾಧಿವೇಶನವು ಆಗಸ್ಟ್ 11 ರಂದು ಸೇರುವುದೆಂದು ಅಧಿಕೃತ ಪ್ರಕಟಣೆ ಹೊರಬಿದ್ದಿದೆ. ಪಕ್ಕನೆ ಈ ಸಂದರ್ಭದಲ್ಲಿ ಹಿಂದಿನ ಅಧಿವೇಶನದ ಕಾರ್ಯಕಲಾಪಗಳ ನೆನಪುಗಳು ನನ್ನ ಸ್ಮೃತಿಪಟಲದಲ್ಲಿ ಮರುಕಳಿಸಿದವು. ಇದು ಮುಂದಿನ ಅಧಿವೇಶನದಲ್ಲಿ ಇನ್ನಷ್ಟು ಪ್ರಭಲವಾಗಿ ಮತ್ತು ಫಲಪ್ರದವಾಗಿ ಭಾಗವಹಿಸಬೇಕಾದ ಈ ಸಂದರ್ಭದಲ್ಲಿ ಹಿಂದಿನ ಅಧಿವೇಶನದ ಅನುಭವವನ್ನು ಮೆಲುಕು ಹಾಕುವುದು ಅನುಕೂಲಕರವಾಗಿರುವುದರಿಂದ, ಇದನ್ನು ಗಂಭೀರವಾಗಿಯೇ ನಾನು ನಡೆಸಲಾರಂಭಿಸಿದೆ. ಈ ಲೇಖನದಲ್ಲಿ ನಾನು ರಾಜ್ಯದ ಜನತೆಯೊಡನೆ ನನ್ನ ಅನುಭವ ವಿನಿಮಯ ಮಾಡಲಿಚ್ಛಿಸುತ್ತಿದ್ದೇನೆ.

ಮಾರ್ಚಿ 11 ರಿಂದ ಮಾರ್ಚಿ 31 ರವರೆಗೆ ಅಧಿವೇಶನವು ನಡೆಯಿತು. ರಾಜ್ಯಪಾಲರ ಭಾಷಣ, (ಬಜೆಟ್) ರಾಜ್ಯದ ಆಯವ್ಯಯಗಳ ಕುರಿತು ಹೇಳಿಕೆ (ಬಜೆಟ್) ಮಂಡಣೆ, ಮುನ್ಸಿಪಾಲಿಟಿ ಮತ್ತು ಕಾರ್ಪೋರೇಷನ್‌ಗಳ ಮಸೂದೆಗಳು, ಸರ್ಕಸ್ ದುರಂತದ ಕಮಿಶನ್ನಿನ ವರದಿ, ಮದ್ಯಪಾನ ದುರಂತದ ಕಮೀಶನಿನ ವರದಿ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮೂರು ವರದಿಗಳು, ಬಳ್ಳಾರಿ ಘಟನೆ, ಬೆಂಗಳೂರು ಲಾಲ್‌ಬಾಗ್ ಘಟನೆ, ಅಧ್ಯಾಪಕರ ಕೆಲಸ ಮುಂದುವರಿಸುವ ಬಗ್ಗೆ, ಸ್ಟೈಪಂಡರಿ ನೌಕರರ ಪ್ರಶ್ನೆ, ಸರಕಾರದ ವಿವಿಧ ಖಾತೆಗಳಲ್ಲಿ ದಿನಗೂಲಿಗಾಗಿ ದುಡಿಯುವ ನೌಕರರ ವಿಷಯ ಹೀಗೆ ಒಂದರ ಮೇಲೆ ಒಂದು ಭಾಷಣ ಮತ್ತು ಭಾಷಣದ ಚರ್ಚೆ, ವರದಿಗಳು ಮತ್ತು ಹೇಳಿಕೆಗಳು, ಘಟನೆಗಳು ಮತ್ತು ಅವುಗಳ ಕುರಿತು ವಾಗ್ವಿವಾದಗಳು ಸುಮಾರು 20 ದಿನ ಕಾಲ ಬೆಳಿಗ್ಗೆ 11 ರಿಂದ ಸಾಯಂಕಾಲ 4 ಘಂಟೆಯವರೆಗೆ ಕೆಲವು ದಿನ ಗಂಟೆ 6ರ ತನಕ ನಡೆಯಿತು.

ಹೊಸಬನಾದುದರಿಂದಲೋ, ಕಲಿಯಬೇಕೆಂಬ ಲವಲವಿಕೆಯಿಂದಲೋ, ಮತ್ತು ಜವಾಬ್ದಾರಿಯುತ ಶಾಸಕನಾಗಬೇಕೆಂಬ ಕರ್ತವ್ಯನಿಷ್ಠೆಯಿಂದಲೋ, ಒಟ್ಟಿನಲ್ಲಿ ಈ ಎಲ್ಲಾ ಕಾರ್ಯಕಲಾಪಗಳು ಅಧಿವೇಶನದಲ್ಲಿ ನಡೆದಾಗ ನಾನೂ ಸಭೆಯಲ್ಲಿ ಹಾಜರಿದ್ದೆ. ನನ್ನ ಬುದ್ಧಿಗನುಗುಣವಾಗಿ ಮತ್ತು ನನ್ನ ಪಕ್ಷ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಧೋರಣೆ ನಿಲುವುಗಳಿಗನುಗುಣವಾಗಿ ಈ ಎಲ್ಲಾ ಕಾರ್ಯಕಲಾಪಗಳಲ್ಲಿ ನಾನೂ ಭಾಗವಹಿಸಿದೆ. ಕೆಲವು ಸಂದರ್ಭದಲ್ಲಿ ಮೂಕ ಪ್ರೇಕ್ಷಕನಾಗಿ ಇನ್ನು ಕೆಲವು ಸಲ ಪ್ರಶ್ನೆಗಳನ್ನು ಕೇಳಿ, ಹಲವು ಸಂದರ್ಭಗಳಲ್ಲಿ 'ಚರ್ಚೆ' ಯಲ್ಲಿ ಭಾಗಿಯಾಗಿ ಒಂದೆರಡು ಸಂದರ್ಭದಲ್ಲಿ ಪ್ರತಿಭಟನಾರ್ಥಕವಾಗಿ ಸ್ಥಾನದಲ್ಲಿ ಎದ್ದು ನಿಂತು ಸ್ವಲ್ಪ ಬೊಬ್ಬಿಟ್ಟು ನಾನು ಭಾಗಿಯಾದೆ.

ಮೊಟ್ಟಮೊದಲು ನಡೆದುದು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ. ಗಂಭೀರವಾಗಿ ಸಭೆಗೆ ಆಗಮಿಸಿ ಗಂಭೀರವಾಗಿ ಮೊದಲಿನ ಎರಡು ಸಾಲುಗಳನ್ನು ಕನ್ನಡದಲ್ಲಿ ಓದಿ, ಆಮೇಲೆ ಇಡೀ ಭಾಷಣಗಳನ್ನು ಇಂಗ್ಲೀಷ್‌ನಲ್ಲಿ ಓದಿದ ಭಾಷಣವನ್ನು ಕುರಿತು ಚರ್ಚೆ ನಡೆದಾಗ ನಾನು ಹಲವು ಭಾರಿ ಅದನ್ನು ಓದಿದ್ದೆ. ಈ ಭಾಷಣವನ್ನು ಹಲವರು ಓದಿದಾಗ ಕೇಳಲಿಲ್ಲವೋ, ಅಥವಾ ಓದಿದರೂ ಅದರಲ್ಲಿದ್ದುದನ್ನು ಗ್ರಹಿಸಲು ಪ್ರಯತ್ನಿಸುವರ ಬದಲು ತಮ್ಮ ಮನಸ್ಸಿಗೆ ಬಂದುದನ್ನು ಮಾತಾಡುತ್ತಿದ್ದರೋ ಎಂದು ನನಗೆ ಕೆಲವೊಮ್ಮೆ ಅನ್ನಿಸಿತು. ಅನಂತರ ನುರಿತವರ ಬಳಿ ಕೇಳಿ ತಿಳಿದುಕೊಂಡಾಗ ರಾಜ್ಯಪಾಲರ ಭಾಷಣದ ಕುರಿತು ಮಾತಾಡುವಾಗ 'ಆಕಾಶವೇ ಮಿತಿ' ಎಂದು ತಿಳಿಯಿತು. ಶ್ರೀಮಾನ್ ವೀರಪ್ಪ ಮೊಯಿಲಿ ಖಂಡತುಂಡವಾಗಿ ಖಂಡಿಸಿ ಒಂದು ಗಂಟೆಯ ಕಾಲ ಮಾತಾಡಿದರು. 'ಥಿಂಕ್ ಟ್ಯಾಂಕ್'ನ್ನು ಸ್ಟಿಂಕ್ ಟ್ಯಾಂಕ್ ಎಂದು ಮೂದಲಿಸಿದುದು ನನ್ನ ಸ್ಮೃತಿಯಲ್ಲಿ ಅಚ್ಚಳಿಯದೆ ಉಳಿದಿತ್ತು. ನಾನೂ ಆ ಕುರಿತು ಮಾತಾಡಿದ್ದೇ 'ಥಿಂಕ್ ಟ್ಯಾಂಕ್' ರಚಿಸಿದುದನ್ನು ನಾನು ಸ್ವಾಗತಿಸಿ, ಅದರಲ್ಲಿ ಏಕಮೇಡಿಶಿಯನರ' ಜತೆ ಅನುಭವಸ್ಥ ನಾಗರಿಕರನ್ನೂ ಸೇರಿಸಬೇಕೆಂದು ನಾನು ಸೂಚಿಸಿದ್ದೆ. ಹೊಸ ಹಲವಾರು ವಿಚಾರಗಳಲ್ಲಿ ಸೂತ್ರಗಳ ರೂಪದಲ್ಲಿ ಅಲ್ಲಲ್ಲಿ ಇದ್ದುದಷ್ಟು (ದ) ನಾನು ಅದರಲ್ಲಿ ಕಂಡೆ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಒಂದೆಡೆ ಒಬ್ಬೊಂಟಿಗರಾಗಿ ಕೂತುಕೊಂಡು (ಹೇಗೆ ಸಮಯ ಸಿಕ್ಕಿತೋ ಅವರಿಗೆ, ನನಗೆ ಆಶ್ಚರ್ಯ) ಸ್ವಲ್ಪ ಆಳವಾಗಿ ಆಲೋಚಿಸಿ ಮಾಡಿದುದರ ಕುರುವುಗಳು ಅದರಲ್ಲಿ ಕಾಣುತ್ತಿದ್ದವು. ಆದರೂ ಇಡೀ ಭಾಷಣದಲ್ಲಿ 'ಜನತಾ ಸರಕಾರದ ಹೊಸ ಆಡಳಿತೆಯ ಸೂತ್ರರೂಪದ ಧೋರಣೆಗಳು ಸ್ಪಷ್ಟವಾಗಿ ಏನು ಎಂಬುದು ಮಾತ್ರ' ತಿಳಿಯುವುದು ಕಷ್ಟವಿತ್ತು. ಬುದ್ಧಿವಂತಿಕೆಯಿಂದ ಬರೆಯಲಾಗಿದೆ ಎಂದು ಖಂಡಿತವಾಗಿ ಹೇಳಬಹುದಾಗಿತ್ತು. ಆದ್ದರಿಂದ, ಸ್ವಾಭಾವಿಕವಾಗಿಯೇ ಈ ಭಾಷಣದ ಕುರಿತಾದ ಭಾಷಣಗಳನ್ನು ಕೂಡ ತುಂಬಾ ಅಸ್ಪಷ್ಟತೆಗಳು ಕೂಡಿದ್ದುವು.

ಸ್ವಚ್ಛ, ದಕ್ಷ ಆಡಳಿತ ಹೇಗೆ ತರುತ್ತಾರೋ ? ಹಿಂದಿನ ಸರಕಾರ ಎಲ್ಲಾ ಡಿಪಾರ್ಟ್‌ಮೆಂಟುಗಳಲ್ಲಿ ನೇಮಕ ಮಾಡದೆ ಖಾಲಿಬಿಟ್ಟ ಸಾವಿರಾರು ಜಾಗಗಳನ್ನು ನಾವು ಭರ್ತಿ ಮಾಡುತ್ತೇವೆ.... ಹೇಗೆ ಭರ್ತಿ ಮಾಡುತ್ತಾರೋ....ಅಭಿವೃದ್ಧಿಗೆ ನಾವು ಅಧಿಕ ಬೆಂಬಲ ಮಾಡಲಿಚ್ಛಿಸುತ್ತೇವೆ .... ಹೇಗೆ, ಎಲ್ಲಿಂದ ಹಣ ಸಂಪಾದಿಸುತ್ತಾರೋ....ಮಾತಾಡಿದವರಲ್ಲಿ ಹೆಚ್ಚಿನವರು ಕಾದು ನೋಡೋಣ....ಆದರೆ ಹೇಳಿದ ಹಾಗೆ ಮಾಡಲಿ, ನನ್ನ ಆಶೀರ್ವಾದ ಎಂದು ಹಾರೈಸಿದರು. ನಾನು ಮಾತಾಡಿ. 'ಅಧಿಕಾರಿಗಳಲ್ಲಿ ಮೂರು ಗುಂಪುಗಳಿವೆ ಎಂದೂ, ಈ ಗುಂಪುಗಾರಿಕೆಯು ಜನತಾ ಆಡಳಿತೆಗೆ ತಂತ್ರವಾಗಿ ಪರಿಣಮಿಸಬಹುದೆಂದೂ, ಈ ಬಗ್ಗೆ ಆಡಳಿತದ ಅಧಿಕಾರಿಗಳಲ್ಲಿ ಒಮ್ಮತ ಸಲ್ಲಿಸಲು ಪ್ರಯತ್ನಿಸಬೇಕೆಂದೂ ಜನತಾ ಪಕ್ಷದ ಆಡಳಿತೆಯನ್ನು ವಿಚಾರಿಸಿದ್ದೆ.

ಆ ಮೇಲೆ ಬಂದುದು 'ಬಜೆಟ್' ಪುನಃ ಇನ್ನೊಂದು ಗಂಭೀರ ಭಾಷಣ. ದೀರ್ಘ ಚರ್ಚೆ... ಎಲ್ಲರಿಗೂ ಎದ್ದು ತೋರಿದುದು 'ಅಧಿಕ ಕೊರತೆ'. ಇಲ್ಲಿ ಆರ್ಥಿಕ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗ್ಗಡೆಯವರಿಗೆ ಆಲೋಚನೆಯನ್ನು 'ಪೂರ್ತಿ ಮಾಡಲು ಸಮಯವೇ ಸಿಕ್ಕಲಿಲ್ಲ'ಎಂಬುದಂತೂ ಸೃಷ್ಟಿಸಿದಷ್ಟು ಕಷ್ಟ ಆದ್ದರಿಂದಲೇ ಅಪೂರ್ವ ಬಜೆಟ್.... 6 ತಿಂಗಳ 'ಓಟ್ ಆಕೌಂಟ್ಸ್' ಮಾತ್ರ.... ಬಜೆಟ್‌ನ ಮೇಲೆ ನಡೆದ ಭಾಷಣಗಳು ಮೂರು ಬಗೆಯವು : ಸಂಪೂರ್ಣ ಫಲದಾಯಕ ಬಜೆಟ್ ಎಂದು ಕೆಲವರು, ಸಂಪೂರ್ಣ ವಿಫಲ ಬಜೆಟ್ ಎಂದು ಹಲವರು, ಸ್ವಾಗತಾರ್ಹವಾದರೂ ಸಂಪೂರ್ಣ ನಾಗರಿಕತೆಯಿಂದ ಕೂಡಿದ್ದಲ್ಲ ಎಂದು ಇನ್ನೂ ಕೆಲವರು. "ಗಂಡಾಂತರಕಾರಿ ಕೊರತೆಯಿಂದ ಕೂಡಿದ ಈ ಬಜೆಟ್ "ರಾಜ್ಯಕ್ಕೆ ಅನಿಷ್ಟದಾಯಕ" ಎನ್ನ ತೊಡಗಿದರು ವಿರೋಧ ಪಕ್ಷದ ಮುಖಂಡರಾದ ಶ್ರೀಮಾನ್ ವೀರಪ್ಪ ಮೊಯಿಲಿಯವರು ಸಾಮರ್ಥ್ಯವಿಲ್ಲ ಶ್ರೀಮಾನ್ ರಾಮಕೃಷ್ಣ ಹೆಗ್ಡೆಯವರಿಗೆ ಎಂದು ಅಪಸ್ವರ ಎತ್ತಿದರು. ಶ್ರೀ ಬಂಗಾರಪ್ಪನವರು ಪೆಳಗಿದ ಕೈ ರಾಮಕೃಷ್ಣ ಹೆಗ್ಡೆಯವರದು, ಅವರ ಕೈಯಲ್ಲಿ ರಾಜ್ಯದ ಆರ್ಥಿಕ ಸುರಕ್ಷಿತ.... ನೋಡಿ, ನೋಡಿ ಅಭಿವೃದ್ಧಿಗೆ ರೂ. 100 ಕೋಟಿಗಿಂತಲೂ ಅಧಿಕ ಹಣ ಮೀಸಲಿಟ್ಟಿದ್ದಾರೆ....ಎಂದು ಹೊಗಳಿದರು ಜನತಾ ಪಕ್ಷದ ಎಂಜಲು ಸಾಹೇಬರುಗಳು, ಬಿ. ಜೆ. ಪಿ. ಯವರು ಹೋಟೇಲುಗಳ ಮೇಲೆ ಹ್ಯಾಕಿದ ಟ್ಯಾಕ್ಸ್ ವಿಪರೀತ ಎಂದು ಬೊಬ್ಬಿಟ್ಟರು....ಎಂ. ಎಸ್. ಕೃಷ್ಣನ್ ಮತ್ತು ಕಾಂ. ಸೂರ್ಯನಾರಾಯಣರಾಯರು ಶ್ರೀಮಾನ್ ರಾಮಕೃಷ್ಣ ಹೆಗ್ಡೆಯವರು ಕೇಂದ್ರದಿಂದ ಹೆಚ್ಚು ಆದಾಯ ಪಡೆಯುವ ಪ್ರಯತ್ನಕ್ಕೆ ಯಶಸ್ವಿಯಾಗಲಿ ಎಂದರು. ಕಾದು ಕಾದು ಕೊನೆಯ ಗಳಿಗೆಯಲ್ಲಿ ಒಂದು ಹದಿನೈದು ನಿಮಿಷ ಕಾಲ ನನಗೆ ಭಾಷಣ ಮಾಡುವ ಅವಕಾಶವನ್ನು ಉಪಾಧ್ಯಕ್ಷರು ಒದಗಿಸಿದರು. ರಾಜ್ಯದ ಕೃಷಿ, ಕೈಗಾರಿಕೆ, ಬರಗಾಲ...ಇವುಗಳ ಕುರಿತಾದ ಅಂದಾಜುಗಳು ಬಜೆಟ್‌ನಲ್ಲಿ ಮಾಡಿದ ಅಂದಾಜುಗಳಿಗಿಂತಲೂ ತೀವ್ರವಾಗಿದೆ ಎಂದೂ, ಯಾವ ಕಾರಣಕ್ಕಾಗಿಯೂ ತೃಪ್ತಿಕರ ಮನೋಭಾವ ಸಲ್ಲದೆಂದೂ ನಾನು ಸಾರಿದೆ....ಆದಾಯವನ್ನು ಅಧಿಕಗೊಳಿಸುವ ಒಂದು ಉಪಾಯವನ್ನು ಸಲ್ಲಿಸಿದೆ. ರಾಜ್ಯಸರ್ಕಾರವು ನಡೆಸುತ್ತಿರುವ 61 ಕೈಗಾರಿಕಾ ವ್ಯಾಪಾರ ಸಂಸ್ಥೆಗಳಲ್ಲಿ ಆಗುತ್ತಿರುವ ರೂ. 210 ಕೋಟಿ ಗಾತ್ರದ ನಷ್ಟವನ್ನು ಭರ್ತಿ ಮಾಡಲು ನಿಷ್ಠುರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದೂ, ಈ ಬಗ್ಗೆ 15, 16, 17ನೇ ಸಾರ್ವಜನಿಕ ತನಿಖಾ ವರದಿಗಳಲ್ಲಿ ನಿರ್ದಿಷ್ಟ ಸೂಚನೆಗಳಿವೆಯೆಂದೂ.... ತೋರಿಸಿಕೊಟ್ಟೆ.

ಅನಂತರ ಬಂದ ಚರ್ಚೆ : ಬಳ್ಳಾರಿ ಮಾನಭಂಗ ಪ್ರಕರಣ, ಲಾಲ್‌ಬಾಗ್ ಮಾನಭಂಗ ಪ್ರಕರಣ, ಬೆಂಗಳೂರು ಬಡಾವಣೆಗಳಲ್ಲಿ ನಡೆಯುವ ಲೂಟಿ, ದಂದೆ, ದರೋಡೆ, ಚೈನು ಎಳೆಯುವಿಕೆ, ಚಾಮರಾಜಪೇಟೆಯಲ್ಲಿ ನಡೆದ ಜಾತೀಯ ದಂಗೆ, ಮಲ್ಲೇಶ್ವರದಲ್ಲಿ ನಡೆದ ಹರಿಜನರ ಮೇಲಿನ ಹಲ್ಲೆ, ಇತ್ಯಾದಿ....ಒಂದರ ನಂತರ ಒಂದು ಘಟನೆಯ ಚರ್ಚೆ.... ಉತ್ಪ್ರೇಕ್ಷೆಯ ಮಾತುಗಳು ಎದ್ದು ಕೇಳುತ್ತಿದ್ದವು.... ಒಂದು ತೀರ್ಮಾನವಂತೂ, ಅದು ಕಾಂಗ್ರೆಸ್ಸು (ಐ) ಶಾಸಕರ ಬಾಯಿಂದ ಮೇಲೆ ಮೇಲೆ ಬರುತ್ತಿದ್ದ ತೀರ್ಮಾನ, ಕರಾರು ವಾಕ್ಕು, ಅರಾಜಕತೆ, ಎಲ್ಲೆಲ್ಲೂ ಅರಾಜಕತೆ....ಇಲ್ಲಿ ಯಾರಿಗೂ ರಕ್ಷಣೆ ಇಲ್ಲ.... ಹರಿಜನ, ಗಿರಿಜನ, ಅಲ್ಪಸಂಖ್ಯಾತರಿಗೆ.... ಹೆಣ್ಣುಮಕ್ಕಳಿಗೆ.... ಆ ಸ್ತ್ರೀಗೆ ರಕ್ಷಣೆಯಿಲ್ಲ ಈ ಜನತಾ ರಾಜ್ಯದಲ್ಲಿ.... ನನಗೆ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದವನಾದ ನನಗೆ ತೀರಾ ಹಾಸ್ಯಾಸ್ಪದವಾಗಿ ಕಂಡು ಬರುತ್ತಿತ್ತು.... ನನ್ನ ಮನಸ್ಸು 1958 ರಲ್ಲಿ ಕಾಂ। ಇ.ಎಂ.ಎಸ್,ರ ನೇತೃತ್ವದ ಅಂದಿನ ಸಂಯುಕ್ತ ಕಮ್ಯೂನಿಸ್ಟ್ ಪಕ್ಷದ ಕೇರಳ ಸರಕಾರದ ಬಗ್ಗೆ ಇಂದಿರಾಗಾಂಧಿಯಿಂದ ಹಿಡಿದು ಸುಚೇತಾ ಕೃಪಲಾನಿವರೆಗೆ ಮಾಡುತ್ತಿದ್ದ ಆಪಾದನೆ ನೆನಪಿಗೆ ಬಂತು.... ಜ್ಯೋತಿಬಸುವಿನ ಸರಕಾರದ ವಿರುದ್ಧ ಕಾಂಗ್ರೆಸ್ಸಿಗರು ಮಾಡಿದ ಸುಳ್ಳು ಪ್ರಚಾರ ನೆನಪಿಗೆ ಬಂತು.... ಕಾಂ॥ ನಾಯನಾರರು ಅಧಿಕಾರಕ್ಕೆ ಬಂದ ದಿನವೇ ಶ್ರೀಮಾನ್ ಸ್ಟೀಫನ್ ಮತ್ತು ಮಕ್ರಾನ್ ಮಾಡಿದ ಗುರುತರದ ಕಾನೂನು ಸುವ್ಯವಸ್ಥೆಯ ಕುಸಿಯುವಷ್ಟು ಕೇರಳದಲ್ಲಿ ಎಂಬ ಹೇಳಿಕೆ ನೆನಪಿಗೆ ಬಂತು.... ನೃಪೆನ್ ಚಕ್ರವರ್ತಿಯ ತ್ರಿಪುರ ಸರಕಾರದ ವಿರುದ್ಧ ಒಂದೇ ಒಂದು ಸೀಟು ಗಳಿಸಲು ಸಾಧ್ಯವಾಗದ ಕಾಂಗ್ರೆಸ್ (ಐ) ಮುಖಂಡರ ಅಪಾದನೆಗಳು ನೆನಪಿಗೆ ಬಂತು.... ಜೊತೆಯಲ್ಲಿ ಕೋಪವೂ ಉಕ್ಕೇರಿ ಬರುತ್ತಿತ್ತು, ಏನು ಕಾಂಗ್ರೆಸ್ (ಐ)ಯವರು ಇಡೀ ದೇಶ ತಮ್ಮ ಸೊತ್ತು ಎಂದು ತಿಳಿದುಕೊಂಡಿದ್ದರೋ ? ಈ ದೇಶದಲ್ಲಿ ಇತರ ರಾಷ್ಟ್ರೀಯ ಪಕ್ಷಗಳಿಗೂ ಜನತೆ ಅಪೇಕ್ಷಿಸಿದಾಗ ಆಳುವ ಹಕ್ಕಿಲ್ಲವೇ. ಕಾಂಗ್ರೆಸ್‌ಗಿಂತ ಭಿನ್ನವಾದ ಕಾಂಗ್ರೆಸ್ಸೇತರ ಪಕ್ಷಗಳು ಎರಡನೇ ಗ್ರೇಡಿನ ನಾಗರಿಕರ ಪಕ್ಷಗಳೇ. ಕೆಲವೊಮ್ಮೆ ನನ್ನ ಸ್ಥಾನದಲ್ಲಿ ಎದ್ದು ನಮ್ಮ ಜಿಲ್ಲೆಯವರೇ ಆದ ಶ್ರೀಮಾನ್ ವೀರಪ್ಪ ಮೋಯ್ಲಿಯವರ ಕಡೆ ಮುಖಮಾಡಿ ಸಾಕು ಮಾಡಿ ನಿಮ್ಮ ಈ ಅಪಸ್ವರವನ್ನು....! ಎಂದು ಬೊಬ್ಬೆಯಿಟ್ಟು ಮತ್ತೆ ಅಧ್ಯಕ್ಷರ ಕಡೆ ನೋಡಿ, ಕೂಡಲೇ ಕುಳಿತುಕೊಂಡೆ.


ರೇಪ್, ಇತ್ಯಾದಿ ಚರ್ಚೆಯಾಗಬೇಕು. ಆದರೆ 'ಎಲ್ಲಾ' ಎಂಬ ರೀತಿಯಲ್ಲಲ್ಲ.

'ಕಾಂಗ್ರೆಸ್ ಅಧಿಕಾರದಲ್ಲಿರುವಾಗ ಎಲ್ಲವೂ ಸುರಕ್ಷಿತ. ಈಗ ಕಾಂಗ್ರೆಸ್ಸೇತರ ಏಕತಾ ಸರಕಾರ. ಇಲ್ಲಿ ಜನತಾ ಅಧಿಕಾರ ಬಂದ ಮರುಕ್ಷಣ ಅರಕ್ಷಣೆ. ಇದೆಲ್ಲಾ ಉತ್ಪ್ರೇಕ್ಷೆಯಲ್ಲದೆ ಮತ್ತೇನು ?

ಆಮೇಲೆ ಹಿಂದಿನ ವರ್ಷಗಳ ಅಧಿವೇಶನಗಳ ಕಾರ್ಯಕಲಾಪಗಳನ್ನು ನಾನು ತಿರುವಿಹಾಕಿದೆ. ಅಲ್ಲಿಯೂ ಇದೇ ಗದ್ದಲ.... ಇದೇ ಉತ್ಪ್ರೇಕ್ಷೆ....

ನನಗಂತೂ 'ರಾಮಕೃಷ್ಣ ಹೆಗ್ಡೆಯವರ ಮಾತು ಚಾಕು ಚೂರಿ ಸಂಸ್ಕೃತಿಯನ್ನ ಅಳಿಸಿ ಹಾಕಲೂ ನನ್ನಿಂದ ಸಾಧ್ಯವಿದ್ದ ಕೆಲಸವನ್ನೆಲ್ಲ ಧಿಟ್ಟತನದಿಂದ ಮಾಡುವೆಎಂಬ ಮಾತು ತುಂಬಾ ಸಮಂಜಸವೆನಿಸಿತು. ಮುಂದೆ ನೋಡಬೇಕು ಇದು ಸಾಧ್ಯವೊ ಎಂದು, ಒಬ್ಬ ಕಾಂಗ್ರೇಸ್ (ಐ) ಶಾಸಕರು ಶಾಸಕರುಗಳಿಗೆ ಪೆನ್ಷನ್ ಕೊಡುವುದನ್ನು ನಿಲ್ಲಿಸಬೇಕು ಎಂಬ ಠರಾವನ್ನು ಖಾಸಗಿಯಾಗಿ ಮಂಡಿಸಿದರು ಇದರ ಮೇಲಿನ ಚರ್ಚೆ ಬಹಳ ಕುತೂಹಲಕಾರಿಯಾಗಿತ್ತು. ಈ ಠರಾವಿಗೆ ನಾನು ಬೆಂಬಲವಿತ್ತೆ, ಹಲವರು ಕಡಾಖಂಡಿತವಾಗಿ ವಿರೋಧಿಸಿದರು. ಬೇಕಾದವರಿಗೆ ಇರಲಿ ಬೇಡದವರಿಗೆ ಬೇಡ ಎಂದು ಅಭಿಪ್ರಾಯ ಪಟ್ಟರು. ಬೇರೆ ಬೇರೆ ದೃಷ್ಟಿಯಲ್ಲಿ ಈವಿಧಾನಸಭೆಯ ಕೆಲಸವನ್ನು ನೋಡುವವರಿದ್ದಾರೆ ಎಂದು ನನಗೆ ಆ ಚರ್ಚೆಯಲ್ಲಿ ತಿಳಿದು ಬಂತು, ನನ್ನ ಮನಸ್ಸಿಗೆ ವಿಧಾನ ಸಭೆ ಎಂದರೆ ಜನತೆಯ ಪ್ರತಿನಿಧಿಗಳ ಸಭೆ ; ಅಲ್ಲಿ ಜನತೆಯ ನಿಕಟವರ್ತಿಗಳಾಗಿ ಜನತೆಯ ಆಸೆ ಆಕಾಂಕ್ಷೆಗಳಿಗೆ ಯಾವಾಗಲೂ ನೈಜವಾಗಿ ಸ್ಪಂದಿಸುವಂದವರಾಗಿ ವರ್ತಿಸುವ ಪ್ರತಿನಿಧಿಗಳ ಸಭೆ ಎಂಬೆಲ್ಲಾ ತಿಳುವಳಿಕೆಯು ಯಥಾರ್ತದಲ್ಲಿ ಎಷ್ಟೊಂದು ವಿಕೃತಕ್ಕೆ ಒಳಗಾಗಬಹುದು ಎಂದು ಕಂಡಿತು. ಕಾರ್ಪೋರೇಶನ್, ಮುನಿಸಿಪಲ್ ಚುನಾವಣಾ ಮಸೂದೆಗಳು ಏನೊಂದು ಚರ್ಚೆಯಿಲ್ಲದೆ ಅಂಗೀಕೃತವಾದವು ಎಂದು ನನಗೆ ಕಂಡಿತು. ಮುನಿಸಿಪಲ್ ಚುನಾವಣೆ ಮಸೂದೆಯಲ್ಲಿ ಒಂದು ಕಾಲಮ್ಮಿನಲ್ಲಿ ಒಂದು ಅಥವಾ ಹೆಚ್ಚು ಎಂಬುದನ್ನ ತೆಗೆದುಹಾಕಿ ಅಸಂದಿಗ್ಧವಾಗಿ ಒಂದಕ್ಕಿಂತ ಹೆಚ್ಚು ಇಂದಿರಬೇಕೆಂಬ ಕಾಲಮ್ ಸೇರಿಸಬೇಕೆಂದು ಎಲ್ಲಾ ಪಕ್ಷ ಹಲವಾರು ಶಾಸಕರ ಅಭಿಪ್ರಾಯವಿರುವುದು ಚರ್ಚೆಯಲ್ಲಿ ಕಂಡು ಬಂದರೂ ಕಾಲಮು ಮಸೂದೆಯಲ್ಲಿ ಇದ್ದ ಹಾಗೆಅಂಗೀಕಾರವಾಯ್ತು. ಸಮಯದ ಮಿತಿ ಮತ್ತು ವಿಧಾನಸಭಾ ಕಾರ್ಯಭಾರದ ಒತ್ತಡ ಕೆಲವೊಮ್ಮೆ ಸಭಾ

(7ನೇ ಪುಟ ನೋಡಿ)



ಆಗಸ್ಟ್ ೫:

ಕಾರ್ಮಿಕ ವರ್ಗದ ಇನ್ನೊಬ್ಬ ಬೋಧಕನ ಸ್ಮರಣೆ

"ಈ ಸಂಪುಟವಂತೂ ಮುಗಿದಂತಾಯಿತು. ಇದು ಸಾಧ್ಯವಾದದ್ದು ಕೇವಲ ನಿನ್ನಿಂದಾಗಿಯೇ. ನನಗಾಗಿ ನೀನು ಸ್ವಯಂತ್ಯಾಗ ಮಾಡದಿರದಿದ್ದರೆ ಬಹುಶಃ ಮೂರು ಸಂಪುಟಗಳಿಗೆ ಬೇಕಾಗುವ ಅಗಾಧ ಕೆಲಸ ಮಾಡಲು ನನಗೆ ಎಂದೂ ಸಾಧ್ಯವಾಗುತ್ತಿರಲಿಲ್ಲ. ಅತ್ಯಂತ ಕೃತಜ್ಞತೆಯಿಂದ ನಾನು ನಿನ್ನನ್ನು ಅಪ್ಪಿಕೊಳ್ಳುತ್ತೇನೆ."

1867 ಆಗಸ್ಟ್ 16ರ ಮುಂಜಾನೆ ಎರಡು ಗಂಟೆಗೆ "ಬಂಡವಾಳ" ಗ್ರಂಥದ ಮೊದಲ ಸಂಪುಟದ ಪ್ರೂಫ್ ತಿದ್ದುವ ಕೆಲಸ ಮುಗಿಸಿ ಕಾರ್ಲ್ ಮಾರ್ಕ್ಸ್‌ರು ಫ್ರೆಡರಿಕ್ ಎಂಗೆಲ್ಸ್‌ರಿಗೆ ಬರೆದ ಪತ್ರದ ಒಕ್ಕಣೆಯಿದು.

ಮಾರ್ಕ್ಸ್ ನಿಧನರಾದಾಗ "ಬಂಡವಾಳ"ದ ಮೊದಲ ಸಂಪುಟವಷ್ಟೇ ಪ್ರಕಟಗೊಂಡಿತ್ತು. ಮಾರ್ಕ್ಸ್‌ರಿಗೆ ಎಂಗೆಲ್ಸ್‌ರಂತಹ ಪ್ರಾಣ ಸ್ನೇಹಿತನೊಬ್ಬ ಇದ್ದಿರದಿದ್ದರೆ ಬಹುಶಃ ಮಾನವೇತಿಹಾಸದಲ್ಲಿಯೇ ಅತ್ಯಂತ ಪ್ರಭಾವಶಾಲಿಯಾದ ಗ್ರಂಥವೊಂದು ಸಂಪೂರ್ಣವಾಗಿ ಪ್ರಕಟಗೊಳ್ಳುತ್ತಿರಲಿಲ್ಲ. ವಾಸ್ತವವಾಗಿ "ಬಂಡವಾಳ"ದ ಪ್ರಕಟಣೆ ಇಬ್ಬರು ಮಹಾನ್ ಮೇಧಾವಿಗಳ ಸಾಧನೆ. ಮಾರ್ಕ್ಸ್ ವಾದ ಒಬ್ಬ ವ್ಯಕ್ತಿಯ ಹೆಸರನ್ನು ಹೊಂದಿದ್ದರೂ ಅದು ಇಬ್ಬರ ಪರಸ್ಪರ ಬೇರ್ಪಡಿಸಲಾಗದ ಕೃತಿ. ಆದ್ದರಿಂದ ಮಾರ್ಕ್ಸ್‌ರ ಮರಣ ಶತಾಬ್ದಿಯ ಈ ವರ್ಷದಲ್ಲಿ ಫ್ರೆಡರಿಕ್ ಎಂಗೆಲ್ಸ್‌ರದ್ದು ವಿಶೇಷವಾಗಿ ನೆನಪಿಸಿಕೊಳ್ಳಬೇಕಾದ ಹೆಸರು. ಈ ಆಗಸ್ಟ್ 5ಕ್ಕೆ ಎಂಗೆಲ್ಸ್ ಮರಣ ಹೊಂದಿ 88 ವರ್ಷಗಳಾಗುತ್ತವೆ.

ಮೊದಲಿಗರು

ಮಾರ್ಕ್ಸ್ ಯುಗಾಂತರಕಾರೀ ಕೃತಿಗಳನ್ನು ಬಿಟ್ಟು ಹೋಗಿದ್ದಾರೆಂಬುದು ನಿಜವಾದರೂ ಅವರಿಗಿಂತ ವಯಸ್ಸಿನಲ್ಲಿ ಎರಡು ವರ್ಷ ಚಿಕ್ಕವರಾಗಿದ್ದ ಎಂಗೆಲ್ಸ್ ಹಲವು ವಿಷಯಗಳಲ್ಲಿ ಅವರಿಗೂ ಮೊದಲಿಗರಾಗಿದ್ದರು. ಈ ಇಬ್ಬರಲ್ಲಿ ಪತ್ರಿಕೆಗಳಲ್ಲಿ ಮೊದಲು ಬರೆಯಲಾರಂಭಿಸಿದವರು, ಮೊದಲು ಆಗಿನ ಸಾಮಾಜಿಕ ವ್ಯವಸ್ಥೆಯನ್ನು ವಿರೋಧಿಸಿದವರು ಎಂಗೆಲ್ಸರೇ. ಮಾರ್ಕ್ಸ್‌ಗಿಂತ ಮೊದಲೇ ಎಂಗೆಲ್ಸ್ ಕ್ರಾಂತಿಕಾರಿ ಪ್ರಜಾಪ್ರಭುತ್ವವಾದಿ ಹಾಗೂ ಗಣರಾಜ್ಯವಾದಿಯೂ ಆದರು. ನಂತರ ಕಾಲ್ಪನಿಕ ಸಮಾಜವಾದ ಹಾಗೂ ಕಮ್ಯುನಿಸಂ‌ಕಡೆಗೆ ಮೊದಲು ಒಲವು ತೋರಿಸಿದವರೂ ಅವರೇ. ಅದೇ ರೀತಿ ರಾಜಕೀಯ ಅರ್ಥಶಾಸ್ತ್ರವನ್ನು ಕಟು ವಿಮರ್ಶೆಗೆ ಒಳಪಡಿಸುವಲ್ಲಿ ಎಂಗೆಲ್ಸರೇ ಮೊದಲಿಗರು.

ಎಂಗಲ್ಸರು ಹುಟ್ಟಿದ್ದು ಜರ್ಮನಿಯ ಪ್ರಷ್ಯನ್ ಚಕ್ರಾಧಿಪತ್ಯದ ಬಾರ್ಮೆನ್ ನಗರದಲ್ಲಿ 1820 ರಲ್ಲಿ. ತಂದೆ ಕಾರ್ಖಾನೆ ಒಡೆಯರಾಗಿದ್ದರೂ ತನ್ನ ಹದಿನೆಂಟನೇ ವಯಸ್ಸಿನಲ್ಲಿ ಯೇ ಉನ್ನತ ವ್ಯಾಸಂಗವನ್ನು ಪೂರೈಸಲಾಗದೆ ಎಂಗೆಲ್ಸ್ ಕೌಟುಂಬಿಕ ಪರಿಸ್ಥಿತಿಯ ಒತ್ತಡದಿಂದಾಗಿ ವಾಣಿಜ್ಯ ಕಂಪೆನಿಯೊಂದರಲ್ಲಿ ಕಾರಕೂನರಾಗಿ ಕೆಲಸಕ್ಕೆ ಸೇರಿಕೊಂಡರು. ಆದರೂ ಇದರಿಂದ ಅವರ ವೈಜ್ಞಾನಿಕ, ರಾಜಕೀಯ ಅಭ್ಯಾಸಕ್ಕೆ, ನಂತರ ದರ್ಶನ ಶಾಸ್ತ್ರದ ಅಧ್ಯಯನಕ್ಕೂ ಅಡ್ಡಿಯೇನೂ ಆಗಲಿಲ್ಲ. ಎಂಗೆಲ್ಸ್ ನಿರಂಕುಶಾಡಳಿತದ ಬದ್ಧದ್ವೇಷಿಯೂ, ಪ್ರಖ್ಯಾತ ದಾರ್ಶನಿಕ ಹೆಗೆಲ್‌ರ ಅನುಯಾಯಿಯೂ ಆದರು. ಆದರೆ ಹೆಗೆಲ್‌ರಂತೆ ಅವರು ಭಾವನಾವಾದಿಯಾಗಿರಲಿಲ್ಲ.

1840ರಲ್ಲಿ ಪ್ರಷ್ಯಾದ ಸೈನ್ಯದಲ್ಲಿ ಸ್ವಯಂಸೇವಕರಾಗಿ ದುಡಿದ ಎಂಗೆಲ್ಸ್ 1842 ರಲ್ಲಿ ಇಂಗ್ಲೆಂಡಿನ ಮ್ಯಾಂಚೆಸ್ಟರ್‌ನಲ್ಲಿ ತನ್ನ ತಂದೆ ಪಾಲುದಾರರಾಗಿದ್ದ ಕಂಪನಿಯಲ್ಲಿ ನೌಕರಿಗೆ ಸೇರಿದರು. ಅಲ್ಲಿ ಕಾರ್ಖಾನೆಯ ಕಚೇರಿಯಲ್ಲೇ ಸುಮ್ಮನೆ ಕೂತಿರದೆ, ಕಾರ್ಮಿಕರು ಜೀವಿಸುತ್ತಿದ್ದ ಅತ್ಯಂತ ಕಿಕ್ಕಿರಿದ ಕೊಳಚೆ ಪ್ರದೇಶಗಳಲ್ಲಿ ಸುತ್ತಾಡಿದರು. ಕಾರ್ಮಿಕರ ಬಡತನವನ್ನು ಕಣ್ಣಾರೆ ಕಂಡರು. ಆದರೆ ನಮ್ಮಲ್ಲಿ ಹಲವು "ಸಮಾಜವಾದಿಗಳು" ಎಂದು ಹೇಳಿಕೊಳ್ಳುವವರಂತೆ ತಮ್ಮ ಆಸಕ್ತಿಯನ್ನು ಅವರು ವೈಯಕ್ತಿಕ ವೀಕ್ಷಣೆಗಷ್ಟೇ ಸೀಮಿತಗೊಳಿಸಿ ತಮ್ಮ "ಮರುಕ", ಮಾನವೀಯತೆ"ಯ ಬಗ್ಗೆ ಬೆನ್ನು ತಟ್ಟಿಕೊಂಡು ಧನ್ಯಭಾವತಾಳಲಿಲ್ಲ. ಬ್ರಿಟಿಶ್ ಕಾರ್ಮಿಕ ವರ್ಗದ ಕುರಿತಾದ ಏನೇ ಬರಹ, ದಸ್ತಾವೇಜು ದೊರೆತರೂ ಅದನ್ನು ಅಧ್ಯಯನಮಾಡಿದರು. ಈ ಎಲ್ಲಾ ವೀಕ್ಷಣೆ, ಅನುಭವ ಹಾಗೂ ಅಧ್ಯಯನಗಳ ಫಲವೇ ಅವರ ಗ್ರಂಥ "ಇಂಗ್ಲೆಂಡಿನಲ್ಲಿ ಕಾರ್ಮಿಕ ವರ್ಗದ ಪರಿಸ್ಥಿತಿ" 1845 ರಲ್ಲಿ ಇದು ಪ್ರಕಟವಾಯಿತು. ಶ್ರಮಜೀವಿ ವರ್ಗ ಅತ್ಯಂತ ಸಂಕಷ್ಟಕ್ಕೊಳಗಾದ ವರ್ಗ ಮಾತ್ರವಲ್ಲ. ಅದರ ಅವಮಾನಕರ ಆರ್ಥಿಕ ದುಸ್ಥಿತಿ ಹೋರಾಟಕ್ಕೆ ಮನುಸ್ಸನ್ನು ಗ್ಗದಂತೆ ಅದನ್ನು ತಡೆಹಿಡಿಯಲಾರದು. ಅಂತಿಮ ವಿಮೋಚನೆಗಾಗಿ ಹೋರಾಟ ಅನಿವಾರ್ಯ. ಈ ಹೋರಾಟದಲ್ಲಿ ಶ್ರಮಜೀವಿ ವರ್ಗ ತನಗೆ ತಾನೇ ಸಹಾಯ ಮಾಡಿಕೊಳ್ಳುತ್ತದೆ. ಸಮಾಜವಾದದಲ್ಲಿಯಷ್ಟೆ ತಮ್ಮ ಮುಕ್ತಿ ಅಡಗಿದೆಯೆಂಬುದನ್ನು ಕಾರ್ಮಿಕರು ತಮ್ಮ ವರ್ಗದ ರಾಜಕೀಯ ಚಳವಳಿಯ ಮೂಲಕ ಮನಗಾಣುತ್ತಾರೆ. ಅದೇ ರೀತಿ ಸಮಾಜವಾದವೆಂಬುದು ಕಾರ್ಮಿಕರ ರಾಜಕೀಯ ಹೋರಾಟದ ಧ್ಯೇಯವಾದಾಗ ಮಾತ್ರ ಅದೊಂದು ಕೇವಲ ಕನಸಾಗಿ ಉಳಿಯದೆ ಒಂದು ಶಕ್ತಿಯಾಗುತ್ತದೆ. ಈ ವಿಚಾರಗಳನ್ನು ಈಗ ಎಲ್ಲಾ ವಿಚಾರಶೀಲರೂ, ಪ್ರಗತಿಗಾಮಿಗಳೂ ಒಪ್ಪುತ್ತಾರೆ. ಆದರೆ 1845 ರಲ್ಲಿ ಅವು ಸಂಪೂರ್ಣ ಹೊಸ ವಿಚಾರಗಳಾಗಿದ್ದವು.

ಚಾರಿತ್ರಿಕ ಗೆಳೆತನದ ಆರಂಭ

1930ರ ದಶಕದ ಅಂತ್ಯದ ವೇಳೆಗಾಗಲೇ ಎಂಗೆಲ್ಸರು ಮಾರ್ಕ್ಸ್‌ರ ಅದಮ್ಯ ಶಕ್ತಿಯ, ಪ್ರತಿಭೆಯ ಬಗ್ಗೆ ಕೇಳಿದ್ದರು. 1842ರಲ್ಲಿ ಇಂಗ್ಲೆಂಡಿಗೆ ಹೋಗುವ ದಾರಿಯಲ್ಲಿ ಅವರು ಜರ್ಮನಿಯ ಕ್ಯೋಲ್ನ್ ನಗರದಲ್ಲಿ "ರೈನಿಷೆ ಜೈತುಂಗ್" ಪತ್ರಿಕೆಯ ಕಚೇರಿಗೆ ಭೇಟಿಕೊಟ್ಟು, ಆಗ ಪತ್ರಿಕೆಯ ಸಂಪಾದಕರಾಗಿದ್ದ ಮಾರ್ಕ್ಸ್‌ರನ್ನು ಭೇಟಿಯಾಗಿದ್ದರು. ಆದರೆ ಪರಿಚಯ ಗಾಢ ಸ್ನೇಹವಾಗಿ ಪರಿವರ್ತನೆಗೊಂಡದ್ದು ಅವರಿಬ್ಬರೂ ಎರಡನೇ ಸಲ ಭೇಟಿಯಾದ ನಂತರವೇ. 1844 ರಲ್ಲಿ ಜರ್ಮನಿಗೆ ಹಿಂತಿರುಗುವ ದಾರಿಯಲ್ಲಿ ಪ್ಯಾರಿಸ್‌ನಲ್ಲಿ ಹತ್ತು ದಿನ ಮಾರ್ಕ್ಸ್‌ರೊಂದಿಗಿದ್ದು ಮಾತುಕತೆ ಚರ್ಚೆಗಳ ನಂತರ ತಾವಿಬ್ಬರೂ ಬೇರೆ ಬೇರೆ ಮಾರ್ಗವಾಗಿ ಸಾಮಾಜಿಕ ಬೆಳವಣಿಗೆಯ ಬಗ್ಗೆ ಸಮಾನ ಅಭಿಪ್ರಾಯಕ್ಕೆ ತಲುಪಿರುವುದನ್ನು ಅವರು ಮನಗಂಡರು. ಭವಿಷ್ಯದ ಸೈದ್ಧಾಂತಿಕ ಹಾಗೂ ಇತರ ಎಲ್ಲಾ ಕ್ಷೇತ್ರಗಳ ಚಟುವಟಿಕೆಗಳಲ್ಲಿ ಪರಸ್ಪರ ಸಹಯೋಗದಿಂದ ಕೆಲಸ ಮಾಡಬೇಕೆಂದು ನಿರ್ಧರಿಸಿದರು. ಅಂದು ಆರಂಭವಾದ ಸ್ನೇಹ ದಿನ ದಿನಕ್ಕೂ ಗಾಢವಾಗುತ್ತಾ ಕೊನೆಯವರೆಗೂ ಮುಂದುವರೆಯಿತು. ಭಿನ್ನ ಭಿನ್ನ ಮಾನಸಿಕ ಚೌಕಟ್ಟಿನ ಈ ಇಬ್ಬರು ವೈಜ್ಞಾನಿಕ ಸಮಾಜವಾದದ ಸ್ಥಾಪಕರು. ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಆಂದೋಲನಕ್ಕೆ ಸೈದ್ಧಾಂತಿಕ ನೆಲೆಗಟ್ಟು ನೀಡಿ ಅದನ್ನು ಬಲಿಷ್ಠ ಶಕ್ತಿಯಾಗಿ ಬೆಳೆಸುವಲ್ಲಿ ಪರಸ್ಪರ ಪೂರಕವಾಗಿ ದುಡಿದರು.

"ಪವಿತ್ರ ಕುಟುಂಬ ಅಥವಾ ವಿಮರ್ಶಾತ್ಮಕ ವಿಮರ್ಶೆಯ ವಿಮರ್ಶೆ" ಎಂಬ ಹೆಸರಿನ ಕೃತಿ ಇವರ ಪರಸ್ಪರ ಬೌದ್ಧಿಕ ಸಹಯೋಗದ ಮೊದಲ ಫಲ. ಕೇವಲ ಸೈದ್ಧಾಂತಿಕ ವಾದ ವಿವಾದಗಳಲ್ಲೇ ಮುಳುಗಿದ್ದು ಶ್ರಮಜೀವಿಗಳ ಬಗ್ಗೆ ತಿರಸ್ಕಾರ ತಾಳಿದ್ದ ಬಾವರ್ ಮತ್ತು ಸಂಗಡಿಗರ ಪ್ರವೃತ್ತಿಯ ಖಂಡನೆ ಈ ಕೃತಿ. ಇದಕ್ಕೆ ಮೊದಲೇ "ಜರ್ಮನ್ - ಫ್ರೆಂಚ್ ವಾರ್ಷಿಕ" ಪತ್ರಿಕೆಯಲ್ಲಿ "ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಯ ರೂಪರೇಷೆಗಳು" ಎಂಬ ಎಂಗೆಲ್ಸ್‌ರ ಲೇಖನ ಪ್ರಕಟಗೊಂಡಿತ್ತು. ಆಗ ಎಂಗಲ್ಸ್‌ಗೆ 24 ವರ್ಷ ವಯಸ್ಸು. ಪಾರಂಪರಿಕ ರಾಜಕೀಯ ಅರ್ಥಶಾಸ್ತ್ರ ಹಾಗೂ ಸಮಾಜದ ಬಗ್ಗೆ ಈ ಲೇಖನದಲ್ಲಿ ಮೂಲಭೂತ ಪ್ರಶ್ನೆಗಳನ್ನೆತ್ತಲಾಗಿತ್ತು. ಈ ಲೇಖನ ಪ್ರಕಟಗೊಂಡ ತಕ್ಷಣದಿಂದ ಎಂಗೆಲ್ಸ್ ರಾಜಕೀಯ ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ಪ್ರಕಾಂಡ ಪಂಡಿತರೆಂದು ಪ್ರಸಿದ್ಧಿ ಪಡೆದರು. ವಾಸ್ತವವಾಗಿ ಇದು ವೈಜ್ಞಾನಿಕ ಸಮಾಜವಾದದ ಮೊದಲ ಆರ್ಥಿಕ ಪ್ರಬಂಧ. ಈ ಲೇಖನ ಮಂಡಿಸಿದ ಹೊಸ ವಿಚಾರಗಳನ್ನು ಮುಂದೆ ಮಾರ್ಕ್ಸ್ "ಬಂಡವಾಳ"ದಲ್ಲಿ ವಿಶದೀಕರಿಸಿದರು.

'ಕಮ್ಯುನಿಸ್ಟ್ ಪ್ರಣಾಳಿಕೆ'

ಮುಂದೆ ಎರಡು-ಮೂರು ವರ್ಷಗಳ ಕಾಲ ಎಂಗೆಲ್ಸ್ ವೈಜ್ಞಾನಿಕ ಅಧ್ಯಯನದಲ್ಲಿ ಹಾಗೂ ಕಾರ್ಮಿಕರ ನಡುವೆ ಚಟುವಟಿಕೆಗಳಲ್ಲಿ ನಿರತರಾದರು. ಈ ನಡುವೆ ಮಾರ್ಕ್ಸ್ ಹಾಗೂ ಎಂಗೆಲ್ಸ್ ಗುಪ್ತ ಜರ್ಮನ್ ಕಮ್ಯುನಿಸ್ಟ್ ಲೀಗ್ ಸಂಪರ್ಕಕ್ಕೆ ಬಂದು, ಲೀಗ್‌ನ ಆದೇಶದಂತೆ ಇಬ್ಬರೂ ಸೇರಿ ತಯಾರಿಸಿದ ಜಗತ್ಪ್ರಸಿದ್ಧ "ಕಮ್ಯುನಿಸ್ಟ್ ಪ್ರಣಾಳಿಕೆ" 1845ರಲ್ಲಿ ಪ್ರಕಟವಾಯಿತು.

1848ರಲ್ಲಿ ಪ್ಯಾರಿಸ್‌ನಲ್ಲಿ ಆರಂಭವಾಗಿ ಪಶ್ಚಿಮ ಯುರೋಪಿನ ಇತರ ದೇಶಗಳನ್ನೂ ವ್ಯಾಪಿಸಿದ ಕ್ರಾಂತಿಯ ವಾತಾವರಣ ಇಬ್ಬರನ್ನೂ ತಾಯ್ನಾಡಾದ ಜರ್ಮನಿಯತ್ತ ಸೆಳೆಯಿತು. ಅಲ್ಲಿ "ನೋಯೆ ರೈನಿಷೆ ಜೈಟುಂಗ್" ಪತ್ರಿಕೆಯ ಮೂಲಕ ಇವರು ಅಲ್ಲಿನ ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಆಶೋತ್ತರಗಳ ಕೇಂದ್ರ ಬಿಂದುವಾದರು. ಆದರೂ ಪ್ರತಿಗಾಮಿಗಳ ಕೈಮೇಲಾಗಿ ಪತ್ರಿಕೆಯನ್ನು ಹತ್ತಿಕ್ಕಲಾಯಿತು. ಮಾರ್ಕ್ಸ್‌ರನ್ನು ದೇಶದಿಂದ ಹೊರಹಾಕಲಾಯಿತು. ಎಂಗೆಲ್ಸ್ ಬಾಡೆನ್ ನಗರದಲ್ಲಿ ಜನತೆಯ ಸಶಸ್ತ್ರ ಬಂಡಾಯದಲ್ಲಿ ಭಾಗವಹಿಸಿ ಮೂರು ಕದನಗಳಲ್ಲಿ ಹೋರಾಡಿದರು. ಬಂಡಾಯಗಾರರ ಸೋಲಿನ ನಂತರ ಅವರು ಲಂಡನ್ನಿಗೆ ಹೋದರು.

1849ರಿಂದ ಸುಮಾರು ಎರಡು ದಶಕಗಳಿಗೂ ಮಿಕ್ಕಿದ ಕಾಲಾವಧಿ ಎಂಗೆಲ್ಸರ ಜೀವನದಲ್ಲಿ "ವಾಣಿಜ್ಯ ಗುಲಾಮಿಕೆ"ಯ ಅವಧಿ. ದೇಶಭ್ರಷ್ಟರಾಗಿ ಲಂಡನ್ನಿನಲ್ಲಿ ಬಂದು ನೆಲಸಿದ ಮಾರ್ಕ್ಸ್ ಕುಟುಂಬದ್ದೈನಂದಿನ ಜೀವನ ನಿರ್ವಹಣೆಗಾಗಿಯೂ ಅಗಾಧ ಕಷ್ಟ-ಕಾರ್ಪಣ್ಯಗಳನ್ನು ಎದುರಿಸಬೇಕಾಗಿ ಬಂದ ದಿನಗಳವು. ಎಂಗೆಲ್ಸ್ ತಾನು ಈ ಹಿಂದೆ ನೌಕರಿ ಮಾಡುತ್ತಿದ್ದ ಮ್ಯಾಂಚೆಸ್ಟರ್‌ನ ಕಂಪನಿಯಲ್ಲಿ ಕಾರಕೂನನಾಗಿ ಸೇರಿದರು. ತಮ್ಮ ಈ "ಗುಲಾಮಿಕೆ"ಯ ಮಧ್ಯೆಯೂ ಅವರು ಮಾರ್ಕ್ಸ್‌ರೊಡನೆ ನಡೆಸುತ್ತಿದ್ದ ಪತ್ರವ್ಯವಹಾರ ಉಲ್ಲಾಸಮಯವಾಗಿರುತ್ತಿತ್ತು. ಜತೆಗೆ ಪ್ರತಿಯೊಂದು ಪತ್ರದಲ್ಲೂ ಇಂತಿಷ್ಟು ದುಡ್ಡು ಕಳಿಸುತ್ತಿದ್ದೇನೆ ಎಂಬ ಉಲ್ಲೇಖವಿರುತ್ತಿತ್ತು. ಈ ಸಮಯದಲ್ಲಿ ಎಂಗೆಲ್ಸರು ಸ್ವತಃ ಆರಾಮ ಜೀವನವನ್ನೇನೂ ನಡೆಸುತ್ತಿರಲಿಲ್ಲ. ಮಾರ್ಕ್ಸ್‌ರ ಮಕ್ಕಳಿಗೆ ಎಂಗೆಲ್ಸರು ಮಾರ್ಕ್ಸ್‌ರ ನಂತರ ಅತ್ಯಂತ ಆಪ್ತ ವ್ಯಕ್ತಿಯಾಗಿದ್ದರು. ಇಷ್ಟು ವರ್ಷಗಳ ಕಾಲ ಎಂಗೆಲ್ಸ್‌ರ ನಿಸ್ವಾರ್ಥ ನೆರವು ಇಲ್ಲದಿದ್ದರೆ ಮಾರ್ಕ್ಸರ ಕುಟುಂಬದ ಗತಿ ಏನಾಗುತ್ತಿತ್ತು ಎಂದು ಹೇಳಲಸಾಧ್ಯ.

ತನ್ನ ಪ್ರಾಣ ಸ್ನೇಹಿತನಿಗಾಗಿ ಎಂಗೆಲ್ಸ್ ಸ್ವಯಂಇಚ್ಛೆಯಿಂದ ಅನುಭವಿಸುತ್ತಿದ್ದ ಈ "ವಾಣಿಜ್ಯ ಗುಲಾಮಿಕೆ" ಅವರಿಗೆ ಯಾತನಾ ಮಯವಾಗಿತ್ತೆಂಬುದು ಮಾರ್ಕ್ಸ್‌ರ ಮಗಳು ಎಲ್ಯನೋರರ ಸ್ಮರಣೆಯೊಂದರಿಂದ

(7ನೇ ಪುಟ ನೋಡಿ)

"ಪುರಾಣ ಗಾಥೆಗಳಲ್ಲಿ ಗೆಳೆತನದ ಬಗ್ಗೆ ಹಲವಾರು ಹೃದಯಸ್ಪರ್ಶಿ ಉದಾಹರಣೆಗಳಿವೆ. ಆದರೆ ಮಾನವ ಗೆಳೆತನದ ಬಗ್ಗೆ ನಮ್ಮ ಪುರಾತನರ ಅತ್ಯಂತ ಹೃದಯ ಸ್ಪರ್ಶಿ ಕಥೆಗಳಿಗೂ ಮಿಗಿಲಾದ ಪರಸ್ಪರ ಸಂಬಂಧ ಹೊಂದಿದ್ದ ಇಬ್ಬರು ವಿದ್ವಾಂಸರು ಹಾಗೂ ಹೋರಾಟಗಾರರು ತಮ್ಮ ವಿಜ್ಞಾನವನ್ನು ಸೃಷ್ಟಿಸಿದರೆಂದು ಯುರೋಪಿನ ಶ್ರಮಜೀವಿ ವರ್ಗ ಹೇಳಿಕೊಳ್ಳಬಹುದು."

—ಲೆನಿನ್.

ಫ್ರೆಡರಿಕ್ ಎಂಗೆಲ್ಸ್ 1895ರ ಆಗಸ್ಟ್ 5 ರಂದು ನಿಧನರಾದರು.

ರೂ. 5 ಲಕ್ಷ ಪಾರ್ಟಿ ನಿಧಿಗೆ ಸಹಾಯ ಮಾಡಿರಿ
ಕೇಂದ್ರ ಸಮಿತಿಯ ಕರೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ರೂ. 5 ಲಕ್ಷ ಕೇಂದ್ರ ನಿಧಿಗೆ ಉದಾರ ದೇಣಿಗೆ ಕೊಡಬೇಕೆಂದು ಸಿಪಿಐ (ಎಂ) ನ ಪಾಲಿಟ್ ಬ್ಯೂರೋ ದೇಶ ವಿದೇಶದ ಗೆಳೆಯರಿಗೂ ಸಹಾನುಭೂತಿದಾರರಿಗೂ ವಿನಂತಿ ಮಾಡಿಕೊಂಡಿದೆ.

ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕ್ ಮಟ್ಟದಲ್ಲಿಯೂ ದೇಣಿಗೆ ಸಂಗ್ರಹಿಸುವ ಕೆಲಸ ನಡೆಸಿದ್ದು, ಅದರಲ್ಲಿ ಒಂದು ಪಾಲನ್ನು ಕೇಂದ್ರಕ್ಕೆ ಕಳುಹಿಸುವರು. ಆದ್ದರಿಂದ ಗೆಳೆಯರೂ, ಹಿತೈಷಿಗಳೆಲ್ಲ ತಮ್ಮ ದೇಣಿಗೆಯನ್ನು ಈ ಕಮಿಟಿಗಳಿಗೆ ಕಳುಹಿಸಬಹುದು ಅಥವಾ ನೇರವಾಗಿ ಕಾ. ದೇಸರಾಜ ಚಡ್ಡಾ, 14, ಅಶೋಕ ರೋಡ್, ನವದಿಲ್ಲಿ ಅವರಿಗೂ ಕಳುಹಿಸಿಕೊಡಬಹುದು.

ವಿಜಯವಾಡದಲ್ಲಿ ಸೇರಿದ ಹನ್ನೊಂದನೇ ಪಾರ್ಟಿ ಕಾಂಗ್ರೆಸ್ಸಿನ ಆದೇಶದಂತೆ ಪಾರ್ಟಿ ಜವಾಬ್ದಾರಿಯನ್ನು ಮುಂದುವರಿಸುವ ಸಲುವಾಗಿ ಈ ನಿಧಿಯನ್ನು ಉಪಯೋಗಿಸಲಾಗುವುದು. ಈ ಹಿಂದಿನ ವರ್ಷದಲ್ಲಿ ಪಾರ್ಟಿ ಕೈಗೊಂಡ ಕೆಲಸದ ಪರಿಣಾಮವಾಗಿ ಬಲಿಷ್ಟವಾದ ಮತ್ತು ಸಂಯುಕ್ತ ಶಾಂತಿ ಚಳುವಳಿಯನ್ನು ಬೆಳೆಸಲು, ಛಿದ್ರಕಾರಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳನ್ನು ಎದುರಿಸಲು, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಲ್ಲಿ ಐಕ್ಯತೆ ತರುವಲ್ಲಿ ಹೆಚ್ಚು ಯಶಸ್ವಿ ಪಡೆಯಲು, ಕಾರ್ಮಿಕ, ರೈತರ ಹಾಗೂ ಇತರ ಪ್ರಜಾಪ್ರಭುತ್ವ ಶಕ್ತಿಗಳ ವಿಶಾಲ ತಳಹದಿಯ ಚಳುವಳಿ ಸಂಘಟಿಸಲು, ಆಳುವ ಕಾಂಗ್ರೆಸ್ಸಿನ ಜನತಾವಿರೋಧಿ, ಪ್ರಜಾಪ್ರಭುತ್ವ ವಿರೋಧಿ ಧೋರಣೆಗೆ ಸಂಯುಕ್ತ ಪ್ರತಿರೋಧ ವ್ಯಕ್ತಪಡಿಸಲು, ಕೊನೆಯಲ್ಲಿ, ಸರ್ವಾಧಿಕಾರವನ್ನೆದುರಿಸಲು ವಿಶಾಲ ಪ್ರತಿರೋಧ ಸಂಘಟಿಸುವ ಪಾರ್ಟಿಯ ಗುರಿಯನ್ನು ಸಾಧಿಸಲು ಶಕ್ಯವಾಗಿದೆ.

ನಮ್ಮ ಪಾರ್ಟಿಯ ಚಟುವಟಿಕೆಯನ್ನು ಇನ್ನೂ ಹೆಚ್ಚು ಮುಂದುವರಿಸಬೇಕಾಗಿದೆ. ಆದ್ದರಿಂದಲೇ ಈ ಪಾರ್ಟಿ ನಿಧಿಗೆ ಕರೆಕೊಟ್ಟಿದ್ದೇವೆ.

ಒಂದೂವರೆ ವರ್ಷದ ಹಿಂದೆ ನಡೆದ ನಮ್ಮ ಪಾರ್ಟಿ ಕಾಂಗ್ರೆಸ್ ವಿಮರ್ಶೆ ಮಾಡಿದಂತೆ, ಇಂದಿರಾ ಕಾಂಗ್ರೆಸ್ಸಿನ ಧೋರಣೆಗಳು ಜನತೆಯಿಂದ ದೂರವಾಗುತ್ತಿದೆ, ಮತ್ತು ನಮ್ಮ ದೇಶದ ಜನರಿಂದ ವಿರೋಧವನ್ನೆದುರಿಸುತ್ತಿದೆ.

ಕಾಂಗ್ರೆಯ ರಾಜ್ಯ-ಕೇಂದ್ರ ಸರಕಾರಗಳು ಹೇರಿರುವ ಕರಭಾರವನ್ನು ವಿರೋಧಿಸಲು ಹೆಚ್ಚೆಚ್ಚು ಜನ ಚಳುವಳಿಯಲ್ಲಿ ಬಂದು ಸೇರಿಕೊಳ್ಳುತ್ತಿದ್ದಾರೆ. ನಾಗರೀಕ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕಗೊಳಿಸುವುದರ ವಿರುದ್ಧ ಜನತೆ ಹೋರಾಡುತ್ತಿದ್ದಾರೆ. ಅದರ ಪ್ರತಿಫಲವಾಗಿ ಸರಕಾರ ತನ್ನ ನಿಲುಮೆಯನ್ನು ಬದಲಾಯಿಸಬೇಕಾಗಿ ಬಂದಿದೆ. ಜಗನ್ನಾಥ ಸರಕಾರ ಬಿಹಾರ ಪ್ರೆಸ್ ಮಸೂದೆಯನ್ನು ರದ್ದು ಪಡಿಸಿರುವುದು ಇದಕ್ಕೊಂದು ಸಾಕ್ಷಿ.

ದೊಡ್ಡ ಹೋರಾಟದ ದಿನಗಳೇ ಮುಂದೆ ಬರಲಿವೆ. ಎಲ್ಲ ಅತ್ಯಾವಶ್ಯಕ ವಸ್ತುಗಳ ಬೆಲೆ ಹೆಚ್ಚಾಗುತ್ತಿರುವಾಗ, ರೈತರಿಗೆ ನ್ಯಾಯ ಬೆಲೆ ನಿರಾಕರಿಸಲಾಗುತ್ತಿದೆ. ಕೈಗಾರಿಕೋದ್ಯಮಿಗಳ ಜೀವನ ಸೂಚ್ಯಾಂಕ ಹೆಚ್ಚಾಗುತ್ತಿತ್ತು. ಜೀವನದ ಖರ್ಚಿನ ಈ ಹೆಚ್ಚಳವನ್ನು ತುಂಬಿಕೊಳ್ಳುವ ಸಲುವಾಗಿ ದುಡಿಯುವ ಜನತೆ ಹೆಚ್ಚಿನ ಸಂಬಳ ತುಟ್ಟಿಭತ್ತೆಗಾಗಿ ಹೋರಾಡಬೇಕಾಗಿದೆ. ಈಗಾಗಲೇ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿರುವಾಗ, ಕಾರ್ಖಾನೆಗಳ ಮುಚ್ಚುವಿಕೆ, ಉದ್ಯೋಗದಿಂದ ತೆಗೆದು ಹಾಕುವಿಕೆಗಳಿಂದಾಗಿ ನಿರುದ್ಯೋಗಿಗಳ ಸೈನ್ಯ ಮತ್ತಷ್ಟು ದೊಡ್ಡದಾಗಿದೆ.

ಆರ್ಥಿಕ ಪರಿಸ್ಥಿತಿ ದೈನಂದಿನಕ್ಕೆ ಹದಗೆಡುತ್ತಿದೆ. ಸಾಮ್ರಾಜ್ಯಶಾಹಿ ರಾಷ್ಟ್ರಗಳ ನೀತಿಯಿಂದಾಗಿ ಇನ್ನೂ ಅಭಿವೃದ್ಧಿ ಹೊಂದದ ದೇಶಗಳ ಮೇಲೆ ಹೆಚ್ಚು ಭಾರ ಬೀಳುತ್ತಿದೆ. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ಮತ್ತು ವಿಶ್ವ ಬ್ಯಾಂಕಿನಿಂದ ಸಾಲ ಪಡೆಯುವ ನಮ್ಮ ದುರ್ಬಲತೆಯಿಂದಾಗಿ ಆ ಸಂಸ್ಥೆಗಳು ಕೇಂದ್ರ ಸರಕಾರದ ಮೇಲೆ ಕರಾರುಗಳನ್ನು ಹೇರುತ್ತಿರುವುದರಿಂದಾಗಿ, ಜನರ ಸಂಕಷ್ಟಗಳು ಇನ್ನೂ ಜಾಸ್ತಿಯಾಗುತ್ತಿವೆ. ಈ ರೀತಿ ಎಲ್ಲ ತರದ ಸಂಕಷ್ಟಗಳಿಗೆ ತುತ್ತಾಗಿರುವ ಜನರ ರಕ್ಷಣೆಗಾಗಿ ಸಂಯುಕ್ತ ಹೋರಾಟ ನಡೆಸಲು ನಮ್ಮ ಪಾರ್ಟಿ ಮುಂದಾಗಬೇಕಾಗಿದೆ.

ಪಶ್ಚಿಮ ಬಂಗಾಲ, ತ್ರಿಪುರಾಗಳ ಎಡರಂಗ ಸರಕಾರಗಳು ತಮ್ಮ ಅಧಿಕಾರದೊಳಗೆ ಜನರಿಗೆ ಪರಿಹಾರ ಒದಗಿಸಲು ಸರ್ವ ಪ್ರಯತ್ನ ನಡೆಸಿದ್ದಾರೆ. ಕೇಂದ್ರ ಸರಕಾರ ಇಂಥ ಒಳ್ಳೆ ಕೆಲಸಕ್ಕೆ ಕಲ್ಲು ಹಾಕುತ್ತಿದೆ. ಬಹಳ ವರ್ಷಗಳಾದರೂ ಪ. ಬಂಗಾಲದ ಭೂಸುಧಾರಣಾ ಮಸೂದೆಗೆ ಅಧ್ಯಕ್ಷರಿನ್ನೂ ಸಹಿ ಹಾಕಿರುವುದಿಲ್ಲ. ಆರ್ಥಿಕ ಸಹಾಯ ನೀಡುವಲ್ಲಿ, ಆಹಾರ ಧಾನ್ಯ ಒದಗಿಸುವಲ್ಲಿ, ಬರಗಾಲ, ನೆರೆಹಾವಳಿಗಳಿಗೆ ಪರಿಹಾರದ ಕುರಿತು ಕೇಂದ್ರದ ಧೋರಣೆ ಸಹಾಯಕವಾಗಿಲ್ಲ. ಈ ಸಮಸ್ಯೆಗಳು ಕೇಂದ್ರ-ರಾಜ್ಯ ಸಂಬಂಧದ ಪ್ರಶ್ನೆಯನ್ನು ಮುಖಪುಟಕ್ಕೆ ತಂದಿವೆ. ಮುಂದಿನ ದಿವಸಗಳಲ್ಲಿ ರಾಜ್ಯಗಳಿಗೆ ಹೆಚ್ಚು ಅಧಿಕಾರ ಕೊಡಿಸುವ ಸಲುವಾಗಿ ತೀವ್ರ ಹೋರಾಟ ನಡೆಸಬೇಕಾಗಿದೆ.

ಅಸ್ಸಾಂನಲ್ಲಿರುವ ನಮ್ಮ ಪಾರ್ಟಿ ಕಾರ್ಯಕರ್ತರು ಪ್ರತ್ಯೇಕತಾವಾದಿ ಶಕ್ತಿಗಳ ಮತ್ತು ಅದರ ಹಿಂದಿರುವ ಸಾಮ್ರಾಜ್ಯಶಾಹಿ ಏಜಂಟರ ವಿರುದ್ಧ ವೀರತನದಿಂದ ಹೋರಾಡುತ್ತಿದ್ದಾರೆ. ಹಲವಾರು ಕಾಮ್ರೇಡ್‌ಗಳು ಹುತಾತ್ಮರಾದರೂ ಕೂಡ, ನಮ್ಮ ಪಕ್ಷ ಧೈರ್ಯದಿಂದ ಹೋರಾಟ ಮುಂದುವರಿಸಿದೆ.

ಪಂಜಾಬ್ ಜನತೆಯ ಪ್ರಜಾಪ್ರಭುತ್ವವಾದಿ ಬೇಡಿಕೆಗಳ ಕುರಿತು ನಿರ್ಣಯ ತೆಗೆದುಕೊಳ್ಳಲು ಕೇಂದ್ರ ತಡ ಮಾಡುತ್ತಿರುವುದರಿಂದ, ಆ ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ಉಂಟಾಗಿದೆ. ಈ ಕಾರಣದಿಂದಾಗಿ ಸಿಖ್ ತೀವ್ರವಾದಿಗಳ ಹಾಗೂ ಜಾತೀಯವಾದಿ ಹಿಂದುಗಳ ಕೈ ಬಲಗೊಳಿಸಿದಂತಾಗಿದೆ. ನಮ್ಮ ಪಕ್ಷ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಈ ಬೇಡಿಕೆಗಳಿಗೆ ಬೆಂಬಲ ಕೊಡುತ್ತಿರುವಾಗಲೇ ಹಲವಾರು ಕಷ್ಟಗಳನ್ನೆದುರಿಸುತ್ತ ಜಾತೀಯ ಸೌಹಾರ್ದತೆಗಾಗಿ ಹೋರಾಟ ನಡೆಸುತ್ತಿದೆ.

ಅಸ್ಸಾಂ ಅಥವಾ ಪಂಜಾಬ ಸಮಸ್ಯೆಗಳ ಕುರಿತು ಕೆಲವು ಬಂಡವಾಳಶಾಹಿ ಪಕ್ಷಗಳ ಅದರಲ್ಲೂ ಬಿಜೆಪಿಯ ಪಾತ್ರ ರಾಷ್ಟ್ರವಿರೋಧಿಯಾಗಿದೆ.

ಇಂಥ ಪರಿಸ್ಥಿತಿಯಲ್ಲಿ. ಸಿ.ಪಿ.ಐ (ಎಂ), ಸಿಪಿಐ, ಪುರೋಗಾಮಿಪಕ್ಷ, ಆರ್.ಎಸ್.ಪಿ. ಗಳು, ಎಡಪಕ್ಷಗಳ ಧೋರಣೆಯನ್ನೊಪ್ಪಿಕೊಳ್ಳುವ ಇತರ ಸಂಘಟನೆ ಹಾಗೂ ಪಕ್ಷಗಳ ಜೊತೆಯಲ್ಲಿ, ಐಕ್ಯತೆಯನ್ನು ಬಲಪಡಿಸಿ, ಆಳುವ ಕಾಂಗ್ರೆ ಮತ್ತು ಇತರ ಬಂಡವಾಳದಾರಿ ವಿರೋಧ ಪಕ್ಷಗಳಿಗೆ ಎಡ ಹಾಗೂ ಪ್ರಜಾಪ್ರಭುತ್ವ ಬದಲಿಯನ್ನು ರಚಿಸಲು ಹೋರಾಟವನ್ನು ಮುಂದುವರಿಸಬೇಕಾಗಿದೆ.

ಜಗತ್ತಿನಲ್ಲುಂಟಾಗಿರುವ ಯುದ್ಧ ಭೀತಿಯನ್ನೆದುರಿಸುವುದರ ಕುರಿತು, ಬಂಡವಾಳಶಾಹಿ ಪಕ್ಷಗಳ ಧೋರಣೆ ಎಡ ಮತ್ತು ಪ್ರಜಾಪ್ರಭುತ್ವ ನೀತಿಗೆ ವಿರೋಧವಾಗಿದೆ. ಸಾಮ್ರಾಜ್ಯಶಾಹಿಗಳ ಆಕ್ರಮಣ ನೀತಿಯ ವಿರುದ್ಧ ನಮ್ಮ ಪಕ್ಷ ಜನಾಭಿಪ್ರಾಯವನ್ನು ಬೆಳೆಸುವುದರಲ್ಲಿ ಯಶಸ್ವಿಯಾಗಿದೆಯೆಂದು ಹೆಮ್ಮೆಯಿಂದ ಹೇಳಬಹುದು.

ಈ ಎಲ್ಲ ಚಟುವಟಿಕೆಗಳನ್ನು ಹೊಂದಿಸಿ ಮಾರ್ಗದರ್ಶನ ನೀಡಬೇಕಾದರೆ ಪಾರ್ಟಿಗೆ ಸಾಕಷ್ಟು ನಿಧಿ ಅಗತ್ಯ. ಆದ್ದರಿಂದ 11ನೇ ಪಾರ್ಟಿ ಕಾಂಗ್ರೆಸ್ ಪಾರ್ಟಿಯ ಮೇಲೆ ಹೇರಿದ ಗುರುತರವಾದ ಜವಾಬ್ದಾರಿಯನ್ನು ಕೇಂದ್ರ ಸಮಿತಿಯಿಂದ ಹಿಡಿದು ಶಾಖೆಯವರೆಗೆ ಸರಿಯಾಗಿ ನಿರ್ವಹಿಸಬೇಕಾದರೆ, ಪಾರ್ಟಿ ನಿಧಿ ಕೂಡಿಸುವುದನ್ನು ಯಶಸ್ವಿಗೊಳಿಸಬೇಕೆಂದು ಪಿ.ಬಿ. ಯು ಎಲ್ಲ ಪಾರ್ಟಿ ಕಮಿಟಿ ಮತ್ತು ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತದೆ. ಪ್ರತಿಯೊಬ್ಬ ಕಾರ್ಮಿಕ, ರೈತ, ಕೃಷಿ ಕೆಲಸಗಾರ, ಮಧ್ಯಮ ವರ್ಗದ ನೌಕರ, ಎಲ್ಲ ವರ್ಗಗಳಿಗೆ ಸೇರಿದ ಪುರುಷರೂ, ಮಹಿಳೆಯರೂ ಪಾರ್ಟಿ ಸಹಾಯ ಮಾಡಿ, ಮುಂದಿನ ವರ್ಷಗಳಲ್ಲ ಇನ್ನೂ ಹೆಚ್ಚಿಗೆ ಅವರ ಸೇವೆ ಮಾಡಲು ಅವಕಾಶ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಬನ್ನಿ ಮಾತಾಡೋಣ

ದೇಶದ ದಾರಿದ್ರ್ಯವನು ಕುರಿತು ಮಾತಾಡೋಣ
ಅಪರಿಚಿತ ಸರ್ಕಾರವನ್ನು ಕುರಿತು ಮಾತಾಡೋಣ
ಪರಲೋಕಕ್ಕೆ ಸಂಬಂಧಿಸಿದ ಕತೆಗಳನು ಬದಿಗಿಟ್ಟು
ಇಹಲೋಕದ ನರಕವನು ಕುರಿತು ಮಾತಾಡೋಣ
ಹಳೆಯದಾಯಿತು ಮುಸುಕಿನ ಲಾರ್ಭಗಳ ಚರ್ಚೆ
ತೆರೆದ ವೇಶ್ಯಾ ಬಜಾರುಗಳ ಕುರಿತು ಮಾತಾಡೋಣ
ಸಂಸಾರದ ಸಂಗತಿಗಳ ಕುರಿತು ಮಾತಾಡೋಣ
ಕೊನೆಯಿರದ ಈ ರಾತ್ರಿಯನು ಕುರಿತು ಮಾತಾಡೋಣ
ಮನ್-ಸಲ್ವಾ*ಗಳ ಕಾಲವೆಂದೋ ಹೋಯಿತು
ಪ್ರಚಲಿತ ಹಸಿವು ಸಂಕಷ್ಟಗಳ ಕುರಿತು ಮಾತಾಡೋಣ
ಪರೀಕ್ಷಿಸೋಣ ಬನ್ನಿರಿ ಇಂದು ಧರ್ಮದ ಭ್ರಮೆಗಳ
ವರ್ತಮಾನದ ವಿಜ್ಞಾನಗಳ ಕುರಿತು ಮಾತಾಡೋಣ
ಕ್ರೂರಿ ಅರಸರ ದೀನ ಪ್ರಜೆಗಳ ಕುರಿತು ಮಾತಾಡೋಣ
ಈ ಪುರಾತನ ಪರಂಪರೆಯ ಕುರಿತು ಮಾತಾಡೋಣ
ಕಿರೀಟ ಸಿಂಹಾಸನಗಳ ಪ್ರಶಂಸೆ ಕೊನೆಗೊಂಡಿತು
ಕ್ಷಾಮಪೀಡಿತ ಪ್ರಜೆಗಳ ಕುರಿತು ಮಾತಾಡೋಣ
ಕುಸಿಯುತಿಹ ಅರಮನೆಯ ಗುಣಗಾನವೇಕೆ?
ಮಜ್ದೂರನ ಓಕಾಸೆಯ ಕುರಿತು ಮಾತಾಡೋಣ

–ಸಾಹಿರ್ ಲೂಧಿಯಾನ್ವಿ
ಅನು:- ಅಬ್ದುಲ್ ಮಜೀದ್ ಖಾನ್

* ದೇವರು ತನ್ನ ಭಕ್ತರಿಗಾಗಿ ಆಹಾರವನ್ನು ಕಳಿಸುತ್ತಿದ್ದನೆಂಬ ಪ್ರತೀತಿ

ದಾಂಡೇಲಿ

ಮುಖ್ಯಮಂತ್ರಿಗಳಿಗೆ ಮನವಿ

ಅನೇಕ ತಿಂಗಳುಗಳಿಂದ ನಡೆಯುತ್ತಿರುವ ಬೆಂಗಳೂರಿನ ಆಂಧ್ರಾ ಸ್ಟೀಲ್ಸ್ ಸದರನ್ ಸ್ಟೀಲ್ಸ್‌ನ ಮುಷ್ಕರ, ಹುಬ್ಬಳ್ಳಿಯ ಬಿ. ಡಿ. ಕೆ. ಅಲಾಯ್ಸ್ ಸುಂದತ್ತಾಕ ಕಂಪನಿಗಳ ಮುಷ್ಕರ, ದಾಂಡೇಲಿಯ ಫೆರೋಅಲಾಯಿಸ್ ಕಾರಖಾನೆಯ, ಔದ್ಯಮಿಕ ಅಶಾಂತಿ ಮತ್ತು ಅಕ್ರಮವಾಗಿ ಕಾರ್ಮಿಕರನ್ನು ಕೆಲಸದಿಂದ ತೆಗೆಯುವದು, ಪೋಲಿಸರ ಮಧ್ಯ ಪ್ರವೇಶ, ಅಲ್ಲದೆ ಸ್ಥಳೀಯ ಪ್ಲ್ಯಾವುಡ್ ಕಂಪನಿಯ ಕಾರ್ಮಿಕವಿರೋಧಿ ನೀತಿ, ಕಾರ್ಮಿಕರಿಗೆ ಕೊಡುತ್ತಿರುವ ಕಿರುಕುಳ ಹೆಚ್ಚುತ್ತಿದ್ದು ಕಾರ್ಮಿಕ ಸಂಘದ ಜತೆಗೆ ಮಾಡಿಕೊಂಡ ಒಡಂಬಡಿಕೆ ಕಾರ್ಯಗತ ಮಾಡದೇ ಇದ್ದದ್ದು, ಇಂಥ ಗಂಭೀರವಾದ ಸಮಸ್ಯೆಗಳಿಗೆ ಸರಕಾರವು ಮಧ್ಯಪ್ರವೇಶಿಸಿ ಪರಿಹಾರವನ್ನು ಕಂಡು ಔದ್ಯಮಿಕ ಶಾಂತಿಗಾಗಿ ಪ್ರಯತ್ನ ನಡೆಸಬೇಕೆಂದು ದಾಂಡೇಲಿಯ ಪ್ಲ್ಯಾವುಡ್ ವರ್ಕರ್ಸ್ ಯೂನಿಯನ್ ಮುಖ್ಯಮಂತ್ರಿಯವರಿಗೆ ಸಲ್ಲಿಸಿದ ಮನವಿಯಲ್ಲಿ ಒತ್ತಾಯಿಸಿದೆ.

ಪ್ಲ್ಯಾವುಡ್, ಹೋಟೆಲ್, ಕಟ್ಟಿಗೆ, ಬೀಡಿ ಮುಂತಾದ ಕಾರ್ಖಾನೆಗಳ ಕಾರ್ಮಿಕರ ಕನಿಷ್ಟ ಕೂಲಿ ರೂ. 500ಕ್ಕೆ ನಿಗದಿಪಡಿಸಿ ಕೃಷಿ ಕಾರ್ಮಿಕರ ಕನಿಷ್ಟ ವೇತನ ಹೆಚ್ಚಿಸುವಲ್ಲಿ ಗಮನ ಹರಿಸಿಲ್ಲ ಎಂದು ಸಂಘವು ಸರಕಾರವನ್ನು ಎಚ್ಚರಿಸಿದೆ.

ಸಂಘವು ಜನತಾ ಸರ್ಕಾರದ ಜನಹಿತ ಕಾರ್ಯವನ್ನು ಶ್ಲಾಘಿಸಿ ಕಾರ್ಮಿಕ ವಿರೋಧಿ ನೀತಿಯನ್ನ ಖಂಡಿಸಿ, ಮೇಲೆ ಕಾಣಿಸಿದ ಸಮಸ್ಯೆಗಳಿಗೆ ಬೇಗನೇ ಪರಿಹಾರ ಕಂಡು ಹಿಡಿಯಬೇಕೆಂದು ಒತ್ತಾಯಿಸಿದೆ.

ಬಿಜಾಪುರ ಬೇಡಿಕೆ ದಿನಾಚರಣೆ

ಸಿಐಟಿಯು ಆದೇಶದ ಮೇರೆಗೆ ಬಿಜಾಪುರ ನಗರ ಸಭೆ ಕೆಲಸಗಾರರು ಬೇಡಿಕೆ ದಿನವನ್ನಾಚರಿಸಿದರು. ನಗರ ಸಭಾಂಗಳದಲ್ಲಿ ನೆರೆದ ಕಾರ್ಮಿಕರನ್ನುದ್ದೇಶಿಸಿ ಎಸ್. ಕೆ. ಉಪಾಧ್ಯಾಯರು ಭಾಷಣ ಮಾಡಿ, ಜನತಾ ಸರಕಾರದ ಕಾರ್ಮಿಕ ನೀತಿ, ಕಾರ್ಮಿಕ ಹೋರಾಟದಲ್ಲಿ ಪೋಲೀಸರ ಪ್ರವೇಶಗಳನ್ನು ವಿವರಿಸಿದರು. ಅನಂತರ ಎಲ್ಲ ಕೆಲಸಗಾರರು ಕಮೀಶನರ ಕಚೇರಿ ಮುಂದೆ ಮತ ಪ್ರದರ್ಶನ ನಡೆಸಿ ಮನವಿಯನ್ನರ್ಪಿಸಿದರು.

ಬೋಧಕನ ಸ್ಮರಣೆ

(5ನೇ ಪುಟದಿಂದ)

ವ್ಯಕ್ತವಾಗುತ್ತದೆ. ಮ್ಯಾಂಚೆಸ್ಟರ್‌ನಲ್ಲಿ ನೌಕರಿಯ ಕೊನೆಯ ದಿನ ಕಚೇರಿಗೆ ಹೊರಡುವಾಗ "ಇದೀಗ ಕೊನೆಯ ದಿನ" ಎಂದು ವಿಜಯೋತ್ಸಾಹದಿಂದ ಅವರು ಉದ್ಗಾರವೆತ್ತಿದರಂತೆ. ಆ ದಿನ ನೌಕರಿ ಮುಗಿಸಿ ಹಿಂದಿರುಗುವಾಗ ತನ್ನ ಊರುಗೋಲನ್ನು ಗಾಳಿಯಲ್ಲಿ ತಿರುವುತ್ತಾ, ಹಾಡುತ್ತಾ ಬರುತ್ತಿದ್ದ ಅವರ ಮುಖ ಸಂತಸದಿಂದ ಬೀಗುತ್ತಿತ್ತಂತೆ. ಆ ದಿನವೇ ತನ್ನ ತಾಯಿಗೆ ಬರೆದ ಪತ್ರದಲ್ಲಿ "ನಾನಿಂದು ಸಂಪೂರ್ಣ ಬೇರೆಯೇ ಆದ ವ್ಯಕ್ತಿಯಾಗಿದ್ದೇನೆ; ಹತ್ತು ವರ್ಷ ಚಿಕ್ಕವನಾಗಿದ್ದೇನೆ" ಎಂದಿದ್ದಾರೆ ಎಂಗೆಲ್ಸ್ ಅವರು. ತನ್ನ ಗೆಳೆಯನ ವೈಜ್ಞಾನಿಕ ಅಧ್ಯಯನ ಹೆಚ್ಚು ಮಹತ್ವಪೂರ್ಣ ಎಂದು ಮನಗಂಡು ಎಂಗೆಲ್ಸ್ ತನ್ನ ವೈಜ್ಞಾನಿಕ ಅಧ್ಯಯನವನ್ನು ಅದಕ್ಕಾಗಿ ತ್ಯಾಗ ಮಾಡಿದರು. ಅದ್ದರಿಂದಲೇ ಸುಮಾರು ಎರಡು ದಶಕಗಳ ಕಾಲ ಎಂಗೆಲ್ಸ್‌ರ ಲೇಖನಿಯಿಂದ ದೊಡ್ಡ ಗ್ರಂಥ ಯಾವುದೂ ಮೂಡಿ ಬರಲಿಲ್ಲ. ಆದರೆ ಸಣ್ಣ ಪುಟ್ಟ ಲೇಖನಗಳಿಗೇನೂ ಈ ಅವಧಿಯಲ್ಲಿ ಕೊರತೆಯಿರಲಿಲ್ಲ.

"ದಂಡನಾಯಕ"

'ಪವಿತ್ರ ಕುಟುಂಬ' ಹಾಗೂ 'ಜರ್ಮನ್ ಐಡಿಯಾಲಜಿ' ರಚನೆಯಲ್ಲಿ ಬೆಳೆದ ಮಾರ್ಕ್ಸ್ ಹಾಗೂ ಎಂಗೆಲ್ಸರ ನಡುವಣ ಬೌದ್ಧಿಕ ಸಹಯೋಗ ಅವರ ಸಮಸ್ತ ಕ್ರಾಂತಿಕಾರಿ ಚಟುವಟಿಕೆಗಳೊಂದಿಗೆ ಇನ್ನಷ್ಟು ಗಾಢವಾಗಿ ಆ ಚಟುವಟಿಕೆಗಳನ್ನು ಗಟ್ಟಿಗೊಳಿಸಿತು. "ನ್ಯೂಯಾರ್ಕ್ ಟ್ರಿಬ್ಯೂನ್"ಗೆ ನಿಯಮಿತವಾಗಿ ಲೇಖನ ಬರೆಯಲು ಮಾರ್ಕ್ಸ್‌ಗೆ ಆಹ್ವಾನ ಬಂದಾಗ ಅವರಿಗೆ ಇಂಗ್ಲೀಷಿನಲ್ಲಿ ಸಾಕಷ್ಟು ಪ್ರಾವೀಣ್ಯವಿಲ್ಲದ್ದರಿಂದ ಅವರ ಜರ್ಮನ್ ಲೇಖನಗಳನ್ನು ಎಂಗೆಲ್ಸರು ಇಂಗ್ಲೀಷಿಗೆ ಅನುವಾದಿಸಿ ಕೊಡುತ್ತಿದ್ದರು. ಎಂಗೆಲ್ಸರನ್ನು ಕೇಳದೆ ಮಾರ್ಕ್ಸ್ ಯಾವುದೇ ಚಟುವಟಿಕೆಗೆ ಇಳಿಯುತ್ತಿರಲಿಲ್ಲ.

1864 ರಲ್ಲಿ "ಅಂತರಾಷ್ಟ್ರೀಯ ದುಡಿಯುವ ಜನರ ಸಂಘ"ದೊಂದಿಗೆ ಆರಂಭವಾದ ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಆಂದೋಲನಕ್ಕೆ ಮಾರ್ಕ್ಸ್ ನಿಧನದ ನಂತರ ಎಂಗೆಲ್ಸರೇ ನಾಯಕರಾದರು. ಮಿಲಿಟರಿ ವಿಷಯಗಳ ಬಗ್ಗೆ ಬಹಳ ಅಧ್ಯಯನ ಮಾಡಿದ್ದ ಎಂಗೆಲ್ಸರಿಗೆ "ಜನರಲ್" ಎಂಬ ಉಪನಾಮವಿತ್ತು. ಮಾರ್ಕ್ಸ್ ನಂತರ ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ಸೇವೆಗೆ ಎಂಗೆಲ್ಸ್ ನಿಜವಾದ ಅರ್ಥದಲ್ಲಿ 'ಜನರಲ್' (ದಂಡನಾಯಕ) ಆದರು. ಜರ್ಮನ್, ಸ್ಪೇನ್, ರುಮಾನಿಯಾ ಹಾಗೂ ರಷ್ಯಾದ ಸಮಾಜವಾದಿಗಳಿಗೆ ಅವರು ಅತ್ಯಂತ ಪ್ರೀತಿ ಪಾತ್ರ ಹಾಗೂ ವಿಶ್ವಾಸಾರ್ಹ ಸಲಹೆಗಾರರಾಗಿದ್ದರು. ರಷ್ಯಾದ ಪರಿಸ್ಥಿತಿಯ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದ ಅವರು 1883 ರಲ್ಲೇ "ರಷ್ಯಾ ಈ ಶತಮಾನದ ಫ್ರಾನ್ಸ್. ಹೊಸ ಸಾಮಾಜಿಕ ಪುನರ್ಸಂಘಟನೆಯ ಹಕ್ಕು ಈ ದೇಶದ ಕ್ರಾಂತಿಕಾರಿಗಳಿಗೇ ಸೇರಿದ್ದು" ಎಂದಿದ್ದರು. ಇದು ಅವರ ಅಗಾಧ ಪ್ರತಿಭೆಗೊಂದು ಸಾಕ್ಷಿ.

ಮ್ಯಾಂಚೆಸ್ಟರ್‌ನಲ್ಲಿ ನೌಕರಿ ಬಿಟ್ಟ ನಂತರ ಎಂಗೆಲ್ಸ್ ಕೂಡಾ ಲಂಡನ್ನಿಗೆ ಬಂದು ನೆಲೆಸಿದರು. ವೈಜ್ಞಾನಿಕ ಅಧ್ಯಯನ ಮುಂದುವರಿದ ಪರಿಣಾಮವಾಗಿ 1878 ರಲ್ಲಿ ಅವರ "ಆ್ಯಂಟಿ-ಡ್ಯೂರಿಂಗ್" ಕೃತಿ ಪ್ರಕಟವಾಯಿತು. ಡ್ಯೂರಿಂಗ್ ಎಂಬ ವ್ಯಕ್ತಿಯ ವಿಚಾರಗಳನ್ನು ಖಂಡಿಸಲೆಂದು ಬರೆದ ಇದು ದರ್ಶನಶಾಸ್ತ್ರ, ಪ್ರಕೃತಿ ವಿಜ್ಞಾನಗಳು ಹಾಗೂ ಸಾಮಾಜಿಕ ವಿಜ್ಞಾನಗಳ ಅತ್ಯಂತ ಮಹತ್ವಪೂರ್ಣ ವಿಶ್ಲೇಷಣೆ ಹೊಂದಿರುವ ಕೃತಿ. 1884 ರಲ್ಲಿ ಆದಿ ಸಮಾಜದ ಚಾರಿತ್ರಿಕ ವಿಶ್ಲೇಷಣೆಯ ಅವರ ಕೃತಿ "ಕುಟುಂಬ, ಖಾಸಗೀ ಆಸ್ತಿ ಹಾಗೂ ಪ್ರಭುತ್ವದ ಉಗಮ" ಪ್ರಕಟವಾಯಿತು.

ಪ್ರಕೃತಿ ವಿಜ್ಞಾನಗಳ ಬೆಳವಣಿಗೆಯ ತತ್ವ ಶಾಸ್ತ್ರೀಯ ನಿರೂಪಣೆ ನೀಡಬೇಕೆಂಬುದು ಎಂಗೆಲ್ಸರ ಮಹದಾಸೆಯಾಗಿತ್ತು. ಈ ಉದ್ದೇಶದಿಂದ "ಪ್ರಕೃತಿಯ ದ್ವಂದ್ವಾತ್ಮಕತೆ" ಎಂಬ ಕೃತಿಗೆ ಸಾಮಗ್ರಿ ಸಂಗ್ರಹಿಸಿಟ್ಟಿದ್ದರು. ಆದರೆ ಹಿಂದೆ ಹೇಳಿದಂತೆ ಮಾರ್ಕ್ಸ್‌ರ ನಿಧನದ ನಂತರ "ಬಂಡವಾಳ"ದ ಉಳಿದೆರಡು ಸಂಪುಟಗಳಿಗಾಗಿ ಮಾರ್ಕ್ಸ್ ಸಂಗ್ರಹಿಸಿಟ್ಟ ಸಾಮಗ್ರಿಗಳನ್ನು, ಅವರ ಕೈ ಬರಹಗಳನ್ನು ಸಂಪಾದಿಸಿ ಪ್ರಕಟಿಸುವ ಅತ್ಯಂತ ಗುರುತರವಾದ ಹಾಗೂ ಕಠಿಣ ಜವಾಬ್ದಾರಿ ಎಂಗೆಲ್ಸ್‌ರ ಹೆಗಲ ಮೇಲೆ ಬಿತ್ತು. ತಮ್ಮ ಕೃತಿಯ ಕೆಲಸವನ್ನು ಬದಿಗಿಟ್ಟು, ಅತ್ಯಂತ ಮುತುವರ್ಜಿಯಿಂದ, ಪರಿಶ್ರಮದಿಂದ ಎಂಗೆಲ್ಸ್ ಈ ಕಾರ್ಯದಲ್ಲಿ ನಿರತರಾದರು. ತಮ್ಮ ನಿಧನದ ಕೆಲವೇ ತಿಂಗಳ ಮೊದಲಷ್ಟೇ ಈ ಕಾರ್ಯವನ್ನು ನೆರವೇರಿಸಿದರು. ಅವರ "ಪ್ರಕೃತಿಯ ದ್ವಂದ್ವಾತ್ಮಕತೆ" ಮಾತ್ರ ಕೈಬರಹದಲ್ಲಿಯೇ ಉಳಿಯಿತು.

20 ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲವರಾಗಿದ್ದ ಎಂಗೆಲ್ಸ್ ಪ್ರತಿಭಾವಂತ ತತ್ವಶಾಸ್ತ್ರಜ್ಞ, ರಾಜಕೀಯ ಅರ್ಥಶಾಸ್ತ್ರಜ್ಞ, ಇತಿಹಾಸಕಾರ, ಮಿಲಿಟರಿ ಪ್ರವೀಣ, ಭಾಷಾಶಾಸ್ತ್ರಜ್ಞ, ಸಾಹಿತ್ಯ ವಿಮರ್ಶಕ, ಅನುವಾದಕ ಹಾಗೂ ರಾಜಕೀಯ ಪ್ರಚಾರಕರಾಗಿದ್ದರು. ಇವೆಲ್ಲಕ್ಕೂ ಮಿಗಿಲಾಗಿ ತಮ್ಮ ಪ್ರಾಣ ಸ್ನೇಹಿತ ಮಾರ್ಕ್ಸ್‌ರೊಂದಿಗೆ ಕಾರ್ಮಿಕ ವರ್ಗದ ಮಹಾನ್ ಬೋಧಕರಾಗಿದ್ದರು. ಅಂತರಾಷ್ಟ್ರೀಯ ಕಾರ್ಮಿಕ ವರ್ಗ ಕಾರ್ಲ್ ಮಾರ್ಕ್ಸ್‌ರೊಂದಿಗೆ ಫ್ರೆಡರಿಕ್ ಎಂಗೆಲ್ಸರಿಗೂ ಚಿರಋಣಿ.

[ಸಂಗ್ರಹ : ಕೆ. ವಿ.]

ಸವದತ್ತಿ, ನರಗುಂದ ಮತ್ತು ನವಲಗುಂದದಲ್ಲಿ

ರೈತ ಹುತಾತ್ಮರ ದಿನಾಚರಣೆ

ಮೂರು ವರ್ಷಗಳ ಹಿಂದೆ ನರಗುಂದ, ನವಲಗುಂದ ರೈತ ಬಂಡಾಯದಲ್ಲಿ ಅಂದಿನ ಜನವಿರೋಧಿ ಕಾಂಗ್ರೆಸ್ ಸರಕಾರದ ಏಜೆಂಟರಂತೆ ವರ್ತಿಸುತ್ತಿದ್ದ ಪೋಲೀಸರ ಗೋಳೀಬಾರ್‌ಗೆ ಬಲಿಯಾದ ನರಗುಂದ ತಾಲ್ಲೂಕಿನ ಚಿಕ್ಕನರಗುಂದ ಗ್ರಾಮದ ಈರಪ್ಪ ಬಸಪ್ಪ ಕಡ್ಲಿಕೊಪ್ಪ, ಮತ್ತು ನವಲಗುಂದ ತಾಲ್ಲೂಕಿನ ಅಳಗವಾಡಿ ಗ್ರಾಮದ ಬಸಪ ಶಿವಪ್ಪ ಲಕ್ಕುಂಡಿ ಹಾಗೂ ಈ ಮಲಪ್ರಭಾ ರೈತರ ಹೋರಾಟದ ಬೆಂಬಲಾರ್ಥವಾಗಿ ನಾಡಿನಾದ್ಯಂತ ನಡೆದ ಪ್ರತಿಭಟನೆಗಳಲ್ಲಿ ಗುಂಡೂರಾಯರ ಗುಂಡುಗಳಿಗೆ ಬಲಿಯಾಗಿ ಹುತಾತ್ಮರಾದ ಎಲ್ಲ ರೈತ, ಕಾರ್ಮಿಕ ಹಾಗೂ ವಿದ್ಯಾರ್ಥಿಗಳ ಸ್ಮರಣಾರ್ಥವಾಗಿ ಜುಲೈ 21 ರಂದು ಸವದತ್ತಿಯಲ್ಲಿ, ನರಗುಂದದ ಚಿಕ್ಕನರಗುಂದ ಗ್ರಾಮದಲ್ಲಿ ಮತ್ತು ನವಲಗುಂದದ ಅಳಗವಾಡಿ ಗ್ರಾಮದಲ್ಲಿ ರೈತ ಹುತಾತ್ಮರ ದಿನಾಚರಣೆಯನ್ನು ಆಚರಿಸಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘದ ಹಾಗೂ ಮಲಪ್ರಭಾ ರೈತ ಸಮನ್ವಯ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾದ ಈ ದಿನಾಚರಣೆಯು ಸವದತ್ತಿಯಲ್ಲಿ ಅಖಿಲ ಭಾರತ ಕಿಸಾನ್ ಸಭೆಯ ಕೆಂಬಾವುಟವನ್ನು ಏರಿಸುವುದರ ಮೂಲಕ ಪ್ರಾರಂಭವಾಯಿತು. ಅನಂತರ ನಡೆದ ಮೆರವಣಿಗೆಯಲ್ಲಿ ರೈತ ಹುತಾತ್ಮರ ಭಾವಚಿತ್ರಗಳನ್ನು ಅಲಂಕೃತ ಟ್ರ್ಯಾಕ್ಟರ್‌ನಲ್ಲಿಟ್ಟು ಊರ ಬೀದಿಗಳಲ್ಲಿ ಮೆರೆಸಲಾಯಿತು. ತಮ್ಮ ವಾದ್ಯಗಳೊಂದಿಗೆ ಬಂದ ಹಳ್ಳಿಯ ರೈತರು ಮಳೆ ಸುರಿಯುತ್ತಾ ಇದ್ದರೂ ಉತ್ಸಾಹದಿಂದ ಮೆರವಣಿಗೆಯಲ್ಲಿ ಪಾಲುಗೊಂಡರು. "ರೈತರೇ ಒಂದಾಗಿ, ಹೋರಾಟಕ್ಕೆ ಮುಂದಾಗಿ" ಮೊದಲಾದ ಘೋಷಣೆಗಳು ಸವದತ್ತಿ ಬೀದಿಗಳಲ್ಲಿ ಪ್ರತಿಧ್ವನಿಸಿದವು. ಆನಂತರ ಜರುಗಿದ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ|| ವಿ. ಎನ್. ಹಳಕಟ್ಟಿ ಹಾಗೂ ಕರ್ನಾಟಕ ಮಾಧ್ಯಮಿಕ ಶಾಲಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕಾ|| ಕೆ. ವಿ. ರಾಯಚೂರ್ ಮಾತನಾಡಿದರು. ಆರಂಭದಲ್ಲಿ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸುವ ನಿರ್ಣಯವನ್ನು ಅಂಗೀಕರಿಸಿ ಎರಡು ನಿಮಿಷಗಳ ಕಾಲ ಮೌನವನ್ನು ಆಚರಿಸಲಾಯಿತು. ರೈತರ ಪರತಿಯಿಂದ ಚಿಕ್ಕುಂಬಿ ಗ್ರಾಮದ ಶ್ರೀ ತೊರಗಲ್ ಇವರು ಮಾತನಾಡಿದರು.

ಕಾ|| ನಿತ್ಯಾನಂದ ಸ್ವಾಮೀಜಿ ಮಾತನಾಡಿ ಈ ಕೆಳಗಿನ ನಿರ್ಣಯಗಳನ್ನು ಮಂಡಿಸಿದರು. 1) ಪ್ರತಿ ವರ್ಷ ಜುಲೈ 21 ರೈತರ ಹುತಾತ್ಮರ ದಿನವಾಗಿ ಆಚರಿಸಬೇಕು. 2) ಇನ್ನೂ ಬಗೆಹರಿಯದೇ ಉಳಿದಿರುವ ಬೇಡಿಕೆಗಳಿಗಾಗಿ ಹೋರಾಟವನ್ನು ಮುಂದುವರಿಸಬೇಕು. 3) ಬೊಮ್ಮಾಯಿ ಸಮಿತಿ ಸಲ್ಲಿಸಿದ ಶಿಫಾರಸುಗಳನ್ನು ಕೂಡಲೇ ಜಾರಿಗೆ ತರಬೇಕು. 4) ಕೆಂಪೇಗೌಡ ಆಯೋಗವು ಸೂಚಿಸಿದ ತಪ್ಪಿತಸ್ಥ ಸರಕಾರಿ ಮತ್ತು ಪೋಲೀಸ್ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು. 5) ಹತ್ತಿ ಬೆಳೆಯುವುದರ ಮೇಲಿನ ನಿಯಂತ್ರಣವನ್ನು ಸರಕಾರ ತೆಗೆದುಹಾಕಬೇಕು. 6) ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಾ ಬಂದಿರುವ ಸವದತ್ತಿ ತಾಲ್ಲೂಕಿನ ಗ್ರಾಮಗಳಿಗೆ ಅನುಕೂಲವಾಗುವ ಚಿಕ್ಕ ನೀರಾವರಿ ಯೋಜನೆಗಳನ್ನು ರೂಪಿಸಬೇಕು. 7) ಸರಕಾರಿ ಅರಣ್ಯ ಭೂಮಿಯನ್ನು ಸಾಗುವಳಿ ಮಾಡಿಕೊಂಡು ಬಂದಿರುವ ರೈತರಿಗೆ ಆ ಭೂಮಿಯನ್ನು ಕೊಟ್ಟು ಕ್ರಮಬದ್ಧಗೊಳಿಸಬೇಕು. 8) ಸವದತ್ತಿ ತಾಲ್ಲೂಕಿನಲ್ಲಿ ಕೆಲ ಜಮೀನುದಾರರು ರೈತರಿಗೆ ಕೊಡುತ್ತಿರುವ ಕಿರುಕುಳಗಳನ್ನು ತಡೆಗಟ್ಟಲು ಸರಕಾರ ಬಿಗಿಯಾದ ಕ್ರಮ ಕೈಗೊಳ್ಳಬೇಕು. 9) ಕೃಷಿ ಕೂಲಿಕಾರರಿಗೆ ನ್ಯಾಯವಾದ ಕೂಲಿ ಸಿಗುವಂತಾಗಬೇಕು. 10) ಬಡ ರೈತರ ಸಾಲ ಮನ್ನಾ ಆಗಬೇಕು. 11) ವ್ಯಾಪಾರಸ್ಥರ ಮೋಸದಿಂದ ಖೊಟ್ಟಿ ಬೀಜ ಬಿತ್ತಿದ ರೈತರಿಗೆ ಪರಿಹಾರ ಸಿಗಬೇಕು. ಈ ನಿರ್ಣಯಗಳಲ್ಲದೆ ಹುಬ್ಬಳ್ಳಿಯಲ್ಲಿ ಕಳೆದ ಎರಡು ತಿಂಗಳುಗಳಿಂದ ಹೋರಾಟ ನಡೆಸಿರುವ ಬಿ. ಡಿ. ಕೆ. ಅಲ್ಲಾ ಮತ್ತು ಸುಂದತ್ತಾ ಕಾರ್ಮಿಕರಿಗೆ ಬೆಂಬಲ ವ್ಯಕ್ತಪಡಿಸುವ ನಿರ್ಣಯವನ್ನು ಸಹ ಸಭೆ ಅಂಗೀಕರಿಸಿತು. ಸಭೆಯ ಅಧ್ಯಕ್ಷತೆಯನ್ನು ಕಾ|| ಎಸ್. ಎಚ್. ಕಪ್ಪಣನವರು ವಹಿಸಿದ್ದರು. ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಶ್ರಮಿಸಿದ ರಾಮದುರ್ಗ ತಾಲ್ಲೂಕಿನ ರೈತ ಸಂಘದ ಸಂಚಾಲಕ ಕಾ| ವಿ.ಪಿ. ಕುಲಕರ್ಣಿ ಬೈಲಹೊಂಗಲ ತಾಲೂಕಿನ ಕಾ| ಬಸಲಿಂಗಪ್ಪ ಡೊಳ್ಳಿನ್ ಮತ್ತು ಕಾ| ಕಾಡಪ್ಪ ಗುರುವಣ್ಣವರ ಧಾರವಾಡದ ಡಿ. ವೈ ಎಫ್. ಐ. ಸಂಗಾತಿಗಳಾದ ಕಾ| ಜಿ. ಸಿ. ವೈ. ಮಠ ಮತ್ತು ಕಾ| ಜಿ. ಎನ್. ದೇಶಪಾಂಡೆ, ಎಸ್. ಎಫ್. ಐ. ಸಂಗಾತಿಗಳಾದ ಕಾ| ಪ್ರಕಾಶ ಉಡಿಕೇರಿ, ಸಿ. ಬಿ. ದೊಡ್ಡಗೌಡ, ಎಫ್. ಎನ್. ಹೊನ್ನ ಬಿಂದಗಿ, ಸಿ. ಎಸ್. ಕಲಾದಗಿ, ಜೆ. ಪಿ. ಹಳೇಮನಿ ಮತ್ತು ಐ. ಪಿ. ಪಾಟೀಲ ಇವರಿಗೆ ಸವದತ್ತಿ ರೈತ ಸಂಘವು ವಂದನೆಗಳನ್ನು ಸಲ್ಲಿಸಿದೆ.

ನವಲಗುಂದ ತಾಲೂಕಿನ ಅಳಗವಾಡಿ ಗ್ರಾಮದಲ್ಲಿ ಮತ್ತು ನರಗುಂದ ತಾಲೂಕಿನ ಚಿಕ್ಕನರಗುಂದ ಗ್ರಾಮದಲ್ಲಿ ರೈತ ಹುತಾತ್ಮರ ಸಮಾಧಿಗಳ ಎದುರು ಸಭೆ ಸೇರಿದ ರೈತರನ್ನು ಉದ್ದೇಶಿಸಿ ಮಾತನಾಡಿದ ಕಾ| ವಿ. ಎನ್. ಹಳಕಟ್ಟಿ, ಕಾ| ಕೆ. ವಿ. ರಾಯಚೂರ ಮತ್ತು ಕಾ| ನಿತ್ಯಾನಂದ ಸ್ವಾಮೀಜಿ, ರೈತರು ತಮ್ಮ ಸೈದ್ಧಾಂತಿಕ ತಿಳುವಳಿಕೆಯನ್ನು ಹೆಚ್ಚಿಸುತ್ತಾ ಬಲಿಷ್ಟ ರೈತ ಸಂಘಟನೆಯನ್ನು ಕಟ್ಟಿ ಹೋರಾಟವನ್ನು ಮುಂದುವರೆಸಿಕೊಂಡು ಹೋಗಲು ಕರೆ ನೀಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರೂ, ಶಾಸಕರೂ ಮತ್ತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿಗಳಾದ ಕಾ|| ಪಿ. ರಾಮಚಂದ್ರರಾಯರು ಈ ಕಾರ್ಯಕ್ರಮಗಳಿಗೆ ಯಶಸ್ಸು ಕೋರಿ ತಂತಿ ಸಂದೇಶವನ್ನು ಕಳುಹಿಸಿದ್ದರು.

ಹಿನ್ನೋಟ

(4ನೇ ಪುಟದಿಂದ)

ಸದಸ್ಯರನ್ನು ತನ್ನದೇ ಆದ ಪಂಕ್ತಿಯಿಂದ ದೂಡಿಬಿಡುತ್ತದೆ, ಸಭಾಸದರನ್ನು ಅಸಹಾಯಕರನ್ನಾಗಿ ಮಾಡುತ್ತದೆ. ನೀರಿನ ಕೊರತೆ ಬರಗಾಲದ ಬವಣೆ ಈ ಬಗ್ಗೆ ಸುದೀರ್ಘವಾದ ಚರ್ಚೆ ನಡೆಯಿತು. ಎಲ್ಲರ ಕಳಕಳಿ ಚರ್ಚೆಯಲ್ಲಿ ವ್ಯರ್ಥವಾಗುತ್ತಿತ್ತು. ಆದರೆ ಇದೀಗ 78 ಕೋಟಿ ಬರಗಾಲಕ್ಕೆ ಕೇಂದ್ರದಿಂದ ಪರಿಹಾರ ಧನವಾಗಿ ಸಿಕ್ಕಬೇಕೆಂಬ ಅಂದಾಜಿನಲ್ಲಿ ಕೇವಲ 15 ಕೋಟಿ ಮಾತ್ರ ಕೇಂದ್ರದಿಂದ ರಾಜ್ಯ ಸರಕಾರಕ್ಕೆ ದಾನವಾಗಿ ಬಂದುದನ್ನು ನೋಡುವಾಗ ಎಷ್ಟು ಚರ್ಚೆ ನಡೆದರೂ ಪರಿಸ್ಥಿತಿ ಗಂಭೀರವಿದ್ದರೂ ಅದು ಎಲ್ಲಿಗೆ ಕೇಳಬೇಕೊ ಅಲ್ಲಿಗೆ ಕೇಳಿಲ್ಲವೆಂದು ಭಾಸವಾಗುತ್ತದೆ. ಇದು ಪ್ರಜಾಪ್ರಭುತ್ವ ಪದ್ಧತಿಯ ಅಪಚಾರವಲ್ಲವೆ. ಕೊನೆ ಕೊನೆಗೆ ಹಾಜರಿ ಕಡಿಮೆಯಾಗುತ್ತಾ ಬಂದು ಸಭಾಸದ್ಯರಿಗೆ ಸತತವಾದ ಈ ಸೆಷನ್ ಯಾಕೊ ನಿಲ್ಲಲಿಲ್ಲವೆಂದು ಕಾಣುತ್ತಿತ್ತು. ಆದರೆ ಸರಕಾರ ಬಜೆಟ್ ಸೂಚನೆಗಳು ಮಾರ್ಚ್ 31 ರೊಳಗೆ ಅಂಗೀಕೃತವಾಗಬೇಕೆಂಬ ಒಂದೇ ಕಾರಣಕ್ಕಾಗಿ ಮುಂದುವರಿಯುತ್ತಾಯಿತ್ತು.

ರಾಷ್ಟ್ರೀಯ ಚಳುವಳಿ ಸಮಿತಿಯ ದಿಲ್ಲಿ ಸಮಾವೇಶ

ಕೇಂದ್ರ ಕಾರ್ಮಿಕ ಸಂಘಟನೆ ಮತ್ತು ಅಖಿಲ ಭಾರತ ಮಟ್ಟದ ಕೈಗಾರಿಕಾವಾರು ಫೆಡರೇಶನ್‌ಗಳ ಎರಡನೇ ಸಮಾವೇಶ ಆಗಸ್ಟ್ 21 ರಂದು ದಿಲ್ಲಿಯಲ್ಲಿ ಸೇರುತ್ತದೆ. ಈ ಸಮಾವೇಶಕ್ಕೆ ಕರ್ನಾಟಕ ಸಿ.ಐ.ಟಿ.ಯು. 40ಕ್ಕೆ ಮೇಲ್ಪಟ್ಟ ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಿದೆ. ಈ ಸಮಾವೇಶದಲ್ಲಿ ಪಾಲ್ಗೊಳ್ಳುವ ಪ್ರತಿನಿಧಿಗಳು, ಸಮ್ಮೇಳನ ಮುಗಿಸಿ ವಾಪಸ್ ಬರಲು ರೈಲ್ವೇ ಟಿಕೇಟಿನ ರಿಸರ್ವೇಶನ್ ಬೇಕಾಗಿದ್ದಲ್ಲಿ, ಪ್ರಧಾನ ಕಾರ್ಯದರ್ಶಿ, ಸಿ.ಐ.ಟಿ.ಯು. 6 ತಲ್‌ಕಟೋರಾ ರೋಡ್. ನವದಿಲ್ಲಿ ಇವರಿಗೆ ಮನಿ ಆರ್ಡರ್ ಮೂಲಕ ಕೂಡಲೇ ಹಣ ಕಳುಹಿಸಿ ಕೊಡಬೇಕು.

ಬೆಂಗಳೂರು ಕಾರ್ಪೊರೇಶನ್ ಚುನಾವಣೆ
ಮತದಾರರಲ್ಲಿ ವಿನಂತಿ

7–8–1983 ರಂದು ನಡೆಯಲಿರುವ ಬೆಂಗಳೂರು ನಗರ ಕಾರ್ಪೊರೇಶನ್ ಚುನಾವಣೆಯಲ್ಲಿ ಈ ಕೆಳಕಂಡ ವಿಭಾಗಗಳಲ್ಲಿ ಸ್ಪರ್ಧಿಸುತ್ತಿರುವ ಸಿ. ಪಿ. ಐ. (ಎಂ.) ನ ಅಭ್ಯರ್ಥಿಗಳಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಿ ಅವರುಗಳನ್ನು ಜಯಶೀಲರನ್ನಾಗಿ ಮಾಡಿ.

1. **ಕಾ|| ಆರ್. ಶ್ರೀನಿವಾಸ್** ಪಾದರಾಯನಪುರ ವಿಭಾಗ
2. **ಕಾ|| ಬಿ. ಕೆ. ಸುಬ್ರಮಣಿ** ಪ್ರಕಾಶನಗರ ವಿಭಾಗ
3. **ಕಾ|| ಕೃಷ್ಣವೇಣಿ** ರಾಮಚಂದ್ರಪುರ ವಿಭಾಗ
4. **ಕಾ|| ರಾಮಯ್ಯ** ಲಕ್ಕಸಂದ್ರ ವಿಭಾಗ

ಸಿ. ಪಿ. ಐ. (ಎಂ.) ಅಭ್ಯರ್ಥಿಗಳು ಸ್ಪರ್ಧಿಸದ ಕಡೆಗಳಲ್ಲಿ ತಮ್ಮ ಮತವನ್ನು ಜನತಾ, ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ.) ಒಕ್ಕೂಟದ ಅಭ್ಯರ್ಥಿಗಳಿಗೆ ಕೊಟ್ಟು ಬೆಂಬಲಿಸಿ.

ಯಶಸ್ವಿ ಗೊಳಿಸಿರಿ

(ಒಂದನೇ ಪುಟದಿಂದ)

ವೆಚ್ಚ ಕಡಿಮೆಗೊಳಿಸಬೇಕೆಂದೂ, 'ಕೂಲಿಗಾಗಿಕಾಳು' ಯೋಜನೆ ಕೈಬಿಡಬೇಕೆಂದೂ, ತೆರಿಗೆ, ಬೆಲೆ, ವ್ಯಾಪಾರ-ಕೈಗಾರಿಕಾನೀತಿ, ಮುಂಗಡ ಪತ್ರ ತಯಾರಿಕೆ ಮುಂತಾದ ವಿಷಯಗಳಲ್ಲಿಯೂ ತಮ್ಮ ಸಲಹೆಯಂತೆ ವರ್ತಿಸಬೇಕೆಂಬ ಬಿಗುವಿನ ಶರತ್ತುಗಳನ್ನು ಹಾಕಲಾಗಿದೆ.

ಈ ಕಾರಣಗಳಿಂದಾಗಿಯೇ ಅಪ್ರತ್ಯಕ್ಷ ತೆರಿಗೆ ಪೆಟ್ರೋಲಿಯಂ ಗೊಬ್ಬರಗಳಹಾಗೆಯೇ ಬಸ್, ರೇಲ್ವೆ, ವಿದ್ಯುಚ್ಛಕ್ತಿ ದರಗಳ ಏರಿಕೆಗೆ ಮುಖ್ಯ ಕಾರಣವಾಗಿದೆ

ಕೇಂದ್ರ ಸರಕಾರ ಅನುಸರಿಸುತ್ತಿರುವ ಕೊರತೆ ಮುಂಗಡ ಪತ್ರದ ನೀತಿ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಬಹಳ ಕೆಟ್ಟ ಪರಿಣಾಮಗಳನ್ನುಂಟು ಮಾಡುತ್ತಿದೆ. ಈ ಕೊರತೆಯನ್ನು ತುಂಬಿಕೊಳ್ಳಲು, ವಿದೇಶಿ ಸಾಲಕ್ಕೆ ಕೈ ಹಾಕಬೇಕು, ವಿದೇಶಿ ಬಂಡವಾಳದಾರರ ಕರಾರಿನಂತೆ ಅಗ್ಗದರದಲ್ಲಿ ನಮ್ಮ ಉತ್ಪಾದನಾ ವಸ್ತುಗಳನ್ನು ರಫ್ತುಮಾಡಬೇಕು. ಮುಂಗಡ ಪತ್ರದಲ್ಲಿಯ ಕೊರತೆಯನ್ನು ತುಂಬಿಕೊಳ್ಳಲು ನೇರ ತೆರಿಗೆಯನ್ನು ಜನರ ಮೇಲೆ ಹೇರಬೇಕು. ಕೊನೆಯದಾಗಿ ಅಂಥ ಕ್ರಮಗಳಿಂದ ಕೊರತೆ ತುಂಬಿಕೊಳ್ಳಲು ಸಾಧ್ಯವಾಗದಿದ್ದರೆ ಹೆಚ್ಚು ನೋಟುಗಳನ್ನು ಛಾಪಿಸಬೇಕು. ಈ ಎಲ್ಲ ಕಾರಣಗಳಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿ ಸಂಪೂರ್ಣ ಕೆಡುತ್ತದೆ. ಹಣದುಬ್ಬರ ಹೆಚ್ಚುತ್ತ ಬೆಲೆ ಗಗನಕ್ಕೇರುತ್ತಲೇ ನಡೆಯುತ್ತದೆ.

ಇಂಥ ಗಂಭೀರ ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸಲು ವಿಶ್ವ ಬ್ಯಾಂಕು, ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ಉತ್ಪಾದನೆ ಮತ್ತು ಕೆಲಸಗಾರರ ವೇತನದ ಮೇಲೂ ಪ್ರತಿಬಂಧ ತೋರಿದ ಕಾರಣ ಉತ್ಪಾದನೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗಿ, ಕಾರ್ಮಿಕರ ಹೆಚ್ಚುತ್ತಿರುವ ಜೀವನ ಮಟ್ಟವನ್ನು ಸಮತೋಲಗೊಳಿಸಲು ಸಂಬಳ, ತುಟ್ಟಿ ಭತ್ತೆ ಹೆಚ್ಚಳದ ಸಲುವಾಗಿ ಹೋರಾಡಬೇಕಾಗಿ ಬರುತ್ತದೆ-ಬಂದಿದೆ. ಹೆಚ್ಚುತ್ತಿರುವ ಕಾರ್ಮಿಕ ಚಳುವಳಿ, ಮಾಲಿಕರೇ ಘೋಷಿಸುತ್ತಿರುವ ಲಾಕೌಟ್‌ಗಳ ಕಾರಣದಿಂದಾಗಿ ಉತ್ಪಾದನೆಯ ಮೇಲೂ ಪರಿಣಾಮ ಉಂಟಾಗುತ್ತದೆ.

ಕಾಂಗ್ರೆಸ್ ಸರ್ಕಾರ ಬಂಡವಾಳಶಾಹಿ ಆರ್ಥಿಕ ನೀತಿಯನ್ನೇ ಅನುಸರಿಸುತ್ತಿರುವುದರಿಂದ ಉತ್ಪನ್ನ ಮತ್ತು ವಿತರಣೆಯ ಮೇಲೆ ಯಾವ ಹಿಡಿತ ಇಲ್ಲದಾಗಿದೆ. ಉತ್ಪಾದಕರು ಹೆಚ್ಚು ಲಾಭ ಪಡೆಯುವ ಉದ್ದೇಶದಿಂದ ಮಾರ್ಕೆಟನಲ್ಲಿ ವಸ್ತುಗಳನ್ನು ಲಭ್ಯವಾಗದಂತೆ ಕೃತ್ರಿಮ ಅಭಾವ ಪರಿಸ್ಥಿತಿಯನ್ನುಂಟು ಮಾಡಿ ಬೆಲೆ ಹೆಚ್ಚಳಕ್ಕೆ ಕಾರಣೀಭೂತರಾಗುತ್ತಾರೆ. ಇಂಥ ಕೃತ್ರಿಮ ಅಭಾವ ಪರಿಸ್ಥಿತಿಯುಂಟು ಮಾಡುವವರ ವಿರುದ್ಧ ಸರಕಾರ ಸರಿಯಾದ ಕ್ರಮ ಕೈಗೊಳ್ಳುತ್ತಿಲ್ಲ.

ಬೆಲೆಯೇರಿಕೆ ವಿರುದ್ಧ ನಮ್ಮ ಹೋರಾಟ ನಡೆಸುತ್ತಿರುವಾಗ ಇಂದಿರಾ ಸರಕಾರ ಆರ್ಥಿಕ ನೀತಿಯನ್ನು, ಕೊರತೆ ಮುಂಗಡ ಪತ್ರ, ಅಪ್ರತ್ಯಕ್ಷ ಕರ ಹೇರುವ ನೀತಿಯನ್ನು, ಅತಿಪ್ರಸರಣದ ಮೂಲವನ್ನು ಜನರಿಗೆ ತಿಳಿಸಿ ಹೇಳಿ ಜಾಗೃತಿಗೊಳಿಸುವುದು ಅತ್ಯಗತ್ಯ.

ಆಗಸ್ಟ 11ರಂದು ರಾಜ್ಯಾದ್ಯಂತ ನಡೆಯುವ ಬೆಲೆ ಏರಿಕೆ ವಿರೋಧವಾಗಿ ಸಂಘಟಿಸಲ್ಪಡುವ ಸಾಮಾಜಿಕ ಹೋರಾಟದ ಸಮಯದಲ್ಲಿ ಸರಕಾರದ ಆರ್ಥಿಕ ನೀತಿಯನ್ನು ಬಯಲುಗೊಳಿಸಿ ಅದರ ಬದಲಾವಣೆಗಾಗಿ ಎಡ ಪ್ರಜಾಪ್ರಭುತ್ವಶಕ್ತಿಗಳ ಸಂಘಟನೆಯತ್ತ ಜನರ ಗಮನ ಸೆಳೆಯುವುದು ಅತ್ಯಗತ್ಯ. ಕಾಂಗ್ರೆಸ್‌ನ ವಿರುದ್ಧ ಬದಲಿ ರಂಗ ರಚಿಸುವ ಅಗತ್ಯತೆಯನ್ನು ವಿವರಿಸುತ್ತಿರುವಂತೆಯೇ ಕೇಂದ್ರದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ರಂಗದ ಬದಲಿ ಸರಕಾರ ಬರುವ ತನಕ ದೇಶದ ಆರ್ಥಿಕ ನೀತಿಯಲ್ಲಿಯೂ ಬದಲಾವಣೆ ಉಂಟುಮಾಡಲು ಸಾಧ್ಯವಿಲ್ಲ ಎಂಬ ನಿಜ ಸಂಗತಿಯನ್ನು ತಿಳಿಸಬೇಕು.

ಎಂಥ ಸರಕಾರವಿದ್ದರೂ ಕೂಡ ಬಲಿಷ್ಠವಾದ ಸಂಯುಕ್ತ ಚಳುವಳಿ ನಡೆಸಿದರೆ, ಸ್ವಲ್ಪ ಮಟ್ಟಿಗೆ ಸರಕಾರದ ನೀತಿಯಲ್ಲಿ ಬದಲಾವಣೆಯನ್ನು ಉಂಟುಮಾಡಲು ಸಾಧ್ಯವೆಂಬ ನಿಜ ಸಂಗತಿ ಪಾರ್ಟಿಯ ರೈತ-ಕಾರ್ಮಿಕರ ಹೋರಾಟಗಳಿಂದ ಕಂಡಿದ್ದೇವೆ. ಆದ್ದರಿಂದ ಬೆಲೆಯೇರಿಕೆಯ ವಿರುದ್ಧ ನಡೆಯುವ ಹೋರಾಟಗಳಿಂದಲೂ ತಾತ್ಪೂರ್ತಿಕ ಪರಿಹಾರ ಪಡೆಯಲು ಸಾಧ್ಯವಾಗುತ್ತದೆ. ಆ ಕಾರಣದಿಂದ ಬೆಲೆಯೇರಿಕೆ ವಿರುದ್ಧ ಹೋರಾಟ ಮುಂದುವರಿಯಲಿ. ಯಶಸ್ವಿಯಾಗಲಿ.

ಶಿವಮೊಗ್ಗ ನೆರೆ ಪರಿಹಾರಕ್ಕೆ ಒತ್ತಾಯ

ವರಾಹಿ ಹಾಗೂ ಚಕ್ರ ಯೋಜನೆಗಳಿಂದ ಮುಳುಗಡೆಯಾಗುವ ಪ್ರದೇಶಗಳ ಜನಗಳಿಗೆ ಪರಿಹಾರ ಮತ್ತು ಪುನರ್‌ವಸತಿ ಸೌಕರ್ಯಗಳು ಕಲ್ಪಿಸಲು ವರಾಹಿ ಪರಿಹಾರ ಮತ್ತು ಪುನರ್‌ವಸತಿ ಹೋರಾಟ ಸಮಿತಿ ಮುಖಂಡತ್ವದಲ್ಲಿ 1978 ರಿಂದಲೂ ಸಂತ್ರಸ್ತರು ಎಷ್ಟೇ ಮನವಿಗಳು, ನಿಯೋಗಗಳು, ಹೋರಾಟಗಳು ನಡೆಸಿದರೂ, ಇದುವರೆಗೂ ಮುಳುಗಡೆ ಸಂತ್ರಸ್ತರಿಗೆ ಯಾವ ಅನುಕೂಲತೆಗಳು ಕಲ್ಪಿಸದೆ ಇರುವುದು ಶೋಚನೀಯ ಎಂದು ಸಿ. ಪಿ. ಐ. (ಎಂ) ಶಿವಮೊಗ್ಗ ಜಿಲ್ಲೆ ಕಾರ್ಯದರ್ಶಿ ಕಾ। ಕೆ. ಚಂದುಕುಟ್ಟಿ ಪತ್ರಿಕಾಹೇಳಿಕೆ ನೀಡಿದ್ದಾರೆ.

ಅರಸು ಸರ್ಕಾರದಿಂದ ಶುರುವಾಗಿ ಗುಂಡೂರಾವ್ ಸರ್ಕಾರ ಮುಗಿದು ಈಗ ಹೆಗ್ಡೆ ಸರ್ಕಾರ ಬಂದರೂ ಸಂತ್ರಸ್ತರಿಗೆ ಏನೂ ಪ್ರಯೋಜನ ಆಗಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶ್ರೀ ಡಿ. ಬಿ. ಚಂದ್ರೇಗೌಡರ ಒಂದು ಆಶ್ವಾಸನೆ, ಮುಳುಗಡೆ ಪ್ರದೇಶದ ಜನಗಳಿಗೆ ಪರಿಹಾರ ಮತ್ತು ಪುನರ್ ವಸತಿ ಕಲ್ಪಿಸಿ ಕೊಡುವುದೇ ಆಗಿತ್ತು. ಆದರೆ ಅವರು ಚುನಾವಣೆಯಲ್ಲಿ ಗೆದ್ದು, ಈಗ ವಿಧಾನಸಭಾ ಅಧ್ಯಕ್ಷರಾಗಿದ್ದಾರೆ. ಆದರೂ ಪರಿಹಾರವಾಗಿಲ್ಲ. ಈಗ ಜನಗಳ ಕ್ಷಮೆ ಕೆಟ್ಟು, ಉಗ್ರ ಹೋರಾಟದ ಹಾದಿ ಹಿಡಿಯಬೇಕಾಗಿ ಬಂದಿದೆ. ರಸ್ತೆ ಬಂದ್ ಚಳುವಳಿಯಿಂದ ನೂರಾರು ಜನ ಬಂಧನಕ್ಕೆ ಒಳಗಾಗಿದ್ದಾರೆ. ಸರ್ಕಾರದ ವಿಳಂಬನೀತಿ ಮತ್ತು ಬಂಧನಗಳವಿರುದ್ಧ ಪ್ರತಿಭಟಿಸಲು ತೀರ್ಥಹಳ್ಳಿ, ಹೊಸನಗರಗಳಲ್ಲಿ ಪೂರ್ಣ ಯಶಸ್ವಿ ಬಂದ್ ನಡೆದಿದೆ. ಇನ್ನೂ ಮುಂದೆ ನಡೆಯಲಿರುವ ಹೋರಾಟ ಇನ್ನೂ ಉಗ್ರ ರೂಪ ತಳೆದರೆ ಆಶ್ಚರ್ಯವೇನೂ ಇಲ್ಲ ಎಂಬುದಾಗಿ ಅವರು ತಿಳಿಸಿದ್ದಾರೆ.

ಇದುವರೆಗೂ ರಾಜಕೀಯ ಪಕ್ಷಗಳು ನೇರವಾಗಿ ಹೋರಾಟಕ್ಕೆ ಇಳಿದಿಲ್ಲ. ನೈತಿಕವಾಗಿ ಬೆಂಬಲ ಕೊಟ್ಟಿದೆ. ಸರ್ಕಾರ ಕೂಡಲೇ ಮುಳುಗಡೆ ಸಂತ್ರಸ್ತರಿಗೆ ಪರಿಹಾರ ಮತ್ತು ಪುನರ್‌ವಸತಿ ಸೌಕರ್ಯ ಕಲ್ಪಿಸಿ ಕೊಡದೇ ಇರುವ ಪಕ್ಷದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಇತರ ಪಕ್ಷಗಳನ್ನು ಸೇರಿಸಿ ನೇರವಾಗಿ ಐಕ್ಯ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಸರ್ಕಾರವನ್ನ ಎಚ್ಚರಿಸಿದ್ದಾರೆ.

ಶ್ರೀ ಲಂಕಾದಲ್ಲಿ ಹತ್ಯಾಕಾಂಡ

(ಒಂದನೇ ಪುಟದಿಂದ)

ಶ್ರೀಲಂಕಾದ ಅಧ್ಯಕ್ಷ ಜಯವರ್ಧನೆಯವರು ತಮಿಳ ಭಾಷಿಕರ ಮೇಲೆ ನಡೆಯುತ್ತಿರುವ ಹತ್ಯಾಕಾಂಡದ ವಿರುದ್ಧ ಯಾವ ಸಹಾನುಭೂತಿಯನ್ನೂ ವ್ಯಕ್ತಮಾಡಿಲ್ಲ. ಅವರ ರಕ್ಷಣೆಗಾಗಿಯೂ ಕ್ರಮ ಕೈಗೊಂಡಿಲ್ಲ. ಅದರ ಬದಲಾಗಿ ಕಮ್ಯುನಿಸ್ಟ್ ಪಾರ್ಟಿಯನ್ನೊಳಗೊಂಡು ಮೂರು ಎಡಪಕ್ಷಗಳ, ತಮಿಳು ಯುನೈಟೆಡ್ ಲಿಬರೇಶನ್ ಫ್ರಂಟಿನ ಮೇಲೆ ಪ್ರತಿಬಂಧ ಹೇರಿ ಪ್ರಜಾಪ್ರಭುತ್ವದ ಕೊಲೆಯನ್ನು ಮಾಡಿದ್ದಾರೆ, ಇಷ್ಟರಿಂದಲೇ ಸಮಾಧಾನಗೊಳ್ಳದೆ, ಅಮೇರಿಕ ಇಂಗ್ಲೆಂಡ ನಂತಹ ಸಾಮ್ರಾಜ್ಯಶಾಹಿ ರಾಷ್ಟ್ರಗಳಿಂದ ಸಹಾಯ ಯಾಚನೆಮಾಡಿ ತನ್ನ ಬಣ್ಣ ಬಯಲು ಗೊಳಿಸಿದ್ದಾರೆ.

ಜಯವರ್ಧನೆ ಸರಕಾರ ಸಿಲೋನಿನ ತಮಿಳು ಭಾಷಿಕರ ಮೇಲೆ ನಡೆಸುತ್ತಿರುವ ಅತ್ಯಾಚಾರವನ್ನು ಮಾರ್ಕ್ಸವಾದಿ ಕಮ್ಯುನಿಸ್ಟ ಪಾರ್ಟಿ ಬಲವಾಗಿ ಖಂಡಿಸುತ್ತದೆ. ತಮಿಳು ಅಲ್ಪ ಭಾಷಿಕರಿಗೆ ಸಂಪೂರ್ಣ ರಕ್ಷಣೆ ಕೊಡಬೇಕೆಂದೂ, ಅವರಿಗಾದ ಅಪಾರ ಹಾನಿ ತುಂಬಿಕೊಡಬೇಕೆಂದೂ ಒತ್ತಾಯ ಪಡಿಸುತ್ತದೆ,

ಅಮೇರಿಕ ಮತ್ತಿನ್ನಿತರ ಪಾಶ್ಚಿಮಾತ್ಯ ದೇಶಗಳ ಸಹಾಯ ಪಡೆದು ಈ ಪ್ರದೇಶದಲ್ಲಿಯ ವಾತಾವರಣವನ್ನು ಕಲುಷಿತಗೊಳಿಸದೆ, ಭಾರತ ದೇಶದೊಡನೆ ಚರ್ಚೆಮಾಡಿ ಅಲ್ಪಭಾಷಿಕ ತಮಿಳರ ಸಮಸ್ಯೆಯನ್ನು ಸೌಹಾರ್ದ ರೀತಿಯಲ್ಲಿ ಬಗೆಹರಿಸಬೇಕೆಂದು ಸಿಪಿಐ (ಎಂ) ಶ್ರೀಲಂಕಾ ಸರ್ಕಾರವನ್ನು ಕೇಳಿಕೊಳ್ಳುತ್ತದೆ.

ಶ್ರೀಲಂಕಾದಲ್ಲಿ ಹಾಗೆಯೇ, ಶ್ರೀಲಂಕಾ ತಮಿಳರ ಮೇಲಾಗುತ್ತಿರುವ ಅತ್ಯಾಚಾರವನ್ನು ಖಂಡಿಸಿ, ಅವರಿಗೆಲ್ಲ ರಕ್ಷಣೆ ನೀಡಬೇಕೆಂದು ಮನವಿ ಮಾಡಿಕೊಳ್ಳಲು ಎಲ್ಲ ಪಕ್ಷಗಳೂ ತಮಿಳುನಾಡಿನಾದ್ಯಂತ ಬಂದ್ ಆಚರಿಸಿರುವುದನ್ನು ಸ್ವಾಗತಿಸುತ್ತದೆ. ತಮಿಳರ ಮೇಲಾದ ಅತ್ಯಾಚಾರವನ್ನು ಖಂಡಿಸಲು ಕೆ. ಜಿ. ಎಫ್‌ನಲ್ಲಿ ಪ್ರತಿಭಟನೆ ವ್ಯಕ್ತಮಾಡಿದಾಗ ಪೋಲೀಸರು ನಡೆಸಿದ ಗೋಳಿಬಾರನ್ನು ಸಿ.ಪಿ.ಐ. (ಎಂ) ಖಂಡಿಸುತ್ತದೆ.

ಶ್ರೀಲಂಕಾ ತಮಿಳರ ಪ್ರಶ್ನೆ ಇಡೀ ಭಾರತ ದೇಶದ ಜನತೆಯ ಪ್ರಶ್ನೆ ಆಗಿರುವುದರಿಂದ ಜನತೆ ಶ್ರೀಲಂಕಾದಲ್ಲಿ ನಡೆಯುತ್ತಿರುವ ಅತ್ಯಾಚಾರವನ್ನು ಪ್ರತಿಭಟಿಸುವ, ತಮಿಳರಿಗೆ ರಕ್ಷಣೆ ನೀಡಬೇಕೆಂದು ಕೇಳಿಕೊಳ್ಳುವ ಚಳುವಳಿಯನ್ನು ಅತ್ಯಂತ ಶಾಂತರೀತಿಯಿಂದ ನಡೆಸಬೇಕೆಂದೂ, ಯಾವದೇ ಪ್ರಚೋದನೆಗೆ ಅವಕಾಶ ಮಾಡಿಕೊಡದೆ, ಪ್ರಾಣ ಮತ್ತು ಆಸ್ತಿಪಾಸ್ತಿಯ ಹಾನಿಗೆ ಕಾರಣೀಭೂತರಾಗಬಾರದೆಂದೂ ಕೇಳಿಕೊಳ್ಳುತ್ತೇವೆ. ಇದರ ಜೊತೆಯಲ್ಲಿಯೇ ಅಮೇರಿಕದ ಸಾಮ್ರಾಜ್ಯಶಾಹಿಯ ಪಿತೂರಿಯ ಕುರಿತು ಜನಜಾಗೃತಿಗೊಳಿಸಬೇಕೆಂದೂ ವಿನಂತಿಸುತ್ತೇವೆ.

ಪರಿಸರ

* ಮೂಲಭೂತ ಕೈಗಾರಿಕೆಗಳ ಉತ್ಪಾದನೆಯ ಅಧಿಕೃತ ವಿಶ್ಲೇಷಣೆಯ ಪ್ರಕಾರ, ಮೇ ತಿಂಗಳಲ್ಲಿ ಮಾರಲು ಯೋಗ್ಯವಾದ ಉಕ್ಕು, ಕಲ್ಲಿದ್ದಲು ಮತ್ತು ಗೊಬ್ಬರಗಳ ಕ್ಷೇತ್ರದಲ್ಲಿ ಉತ್ಪಾದನೆ ಶೇಕಡಾ 3.5 ರಿಂದ ಶೇ. 20ರಷ್ಟು ಇಳಿದಿದೆ.

ಯು. ಎನ್. ಐ. ಜುಲೈ 18.

* ಸಂಪೂರ್ಣ ನಿರ್ಲಕ್ಷ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಮೀಸಲಾದ ಹಣಕಾಸನ್ನು ಉಚ್ಚ ಶಿಕ್ಷಣಕ್ಕೆ ವರ್ಗಾಯಿಸಿರುವುದರಿಂದ ಪ್ರಾಥಮಿಕ ಶಿಕ್ಷಣದಲ್ಲಿ ಆರನೇಯ ಯೋಜನೆ ನಿಗದಿಪಡಿಸಿರುವ ಗುರಿಯನ್ನು ಹಲವು ರಾಜ್ಯಗಳು ತಲುಪದೆ ಹೋಗಬಹುದು.

ಇಂಡಿಯನ್ ಎಕ್ಸಪ್ರೆಸ್ ಜುಲೈ 18.

* ಇಂದಿರಾಗಾಂಧಿ ಮತ್ತು ಆರ್. ಎಸ್. ಎಸ್. ನಡುವೆ ಅಂತರ್ವಾಹಿಯಾದ ಸ್ನೇಹ ಸಂಬಂಧವಿದೆ. ಬಿ.ಜೆ.ಪಿ. ನಾಯಕ ಅಟಲ್ ಬಿಹಾರಿ ವಾಜಪೇಯಿಯವರಿಗಿಂತ ಇಂದಿರಾಗಾಂಧಿಯವರೇ ಉತ್ತಮ "ಹಿಂದೂ" ಎಂದು ಆರ್ ಎಸ್.ಎಸ್. ಜನ ನಂಬಿರುವುದೇ ಈ ಸ್ನೇಹಕ್ಕೆ ಸೇತು ಈ ಅಂತರ್ವಾಹಿ ಸ್ನೇಹ ಬಹಿರಂಗ ಸ್ನೇಹವಾದ ದಿನ ಇಂದಿರಾ ಪ್ರಭುತ್ವ ಕೊನೆಗೊಳ್ಳುವುದು.

— ಎ. ಕೆ. ಸುಬ್ಬಯ್ಯ

* ನಿಜ ಹೇಳಬೇಕೆಂದರೆ ಈ (ಭಾರತ ಯಾತ್ರಾ) ಕಾರ್ಯಕ್ರಮವನ್ನು ಕೈಗೊಂಡದ್ದು ಏಕೆ ಎಂಬುದೇ ನನಗೆ ಅರ್ಥವಾಗಿಲ್ಲ. ಕಳೆದ ಅರ್ಧ ಶತಮಾನದಿಂದಲೂ ನಾನು ಸಕ್ರಿಯ ರಾಜಕಾರಣದಲ್ಲಿದ್ದೇನೆ. ಆದರೂ ನನ್ನ ಪಕ್ಷವನ್ನು ಬಿಟ್ಟು ನಾನೇ ಸ್ವಂತವಾಗಿ ಜನಸಂಪರ್ಕ ಇಟ್ಟುಕೊಳ್ಳಬಹುದೆಂಬುದನ್ನು ನಾನು ಯೋಚಿಸಲು ಸಾಧ್ಯವಿಲ್ಲ. ನಾನು ಇದುವರೆಗೆ ಏನೇನು ಕೆಲಸ ಮಾಡುತ್ತಿದ್ದೇನೆಯೋ ಆ ಕೆಲಸವಲ್ಲ ಜನತೆಯ ಸಮಸ್ಯೆಗಳಿಗೆ ಸಂಬಂಧಿಸಿದ್ದು ಎಂದುಕೊಂಡಿದ್ದೇನೆ.

—ಇ. ಎಂ. ಎಸ್. ನಂಬೂದ್ರಿಪಾದ್

Printed & Published by P. Ramachandra Rao by him on behalf of the Communist Party of India (Marxist) Karnataka State Committee V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited, 54/1, K R. Road, Bangalore-4 Editor: P. RAMACHANDRARAO